# ಧೈರ್ಯದ ದಾರಿ

ನಿಮ್ಮ ನಂಬಿಕೆಯ ಧ್ವನಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 167

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಬುಧವಾರ: 10-06-2026


# ಕಾಂಗ್ರೆಸ್‌ನಿಂದ ಮೈತ್ರಿ ಒಡೆಯಲು ಯತ್ನ

**ಮಂಡ್ಯ/ತಗ್ಗಹಳ್ಳಿ:ಜೂ. 9–** ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ಕಾಂಗ್ರೆಸ್ಸಿಗರಿಗೆ ಈಗ ಇದ್ದಕ್ಕಿದ್ದಂತೆ ಎಲ್ಲಿಲ್ಲದ ಅನುಕಂಪ ಬಂದಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಲ್ಲಿ ಬಿರುಕು ಮೂಡಿಸಲು ಕಾಂಗ್ರೆಸ್ ನಾಯಕರು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಇದು ಸಾಧ್ಯವಿಲ್ಲ," ಎಂದು ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.



ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಬಿಜೆಪಿ–ಜೆಡಿಎಸ್ ಮೈತ್ರಿಯಿಂದ ರಾಜ್ಯಸಭೆ ಟಿಕೆಟ್ ತಪ್ಪಿರುವ ಬಗ್ಗೆ ಕಾಂಗ್ರೆಸ್ ನಾಯಕರ ಮಾತುಗಳಿಗೆ ಕೇಂದ್ರಸಚಿವ ಕುಮಾರಸ್ವಾಮಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದುರಾಜ್ಯಸಭೆ ಟಿಕೆಟ್‌ಗೆ ದೇವೇಗೌಡರು ಯಾವುದೇ ಅರ್ಜಿಯನ್ನೇ ಹಾಕಿಲ್ಲ "ದೇವೇಗೌಡರದ್ದು ಹೋರಾಟದ ಬದುಕು. ಅವರು ಅಧಿಕಾರಕ್ಕಾಗಿ ಎಂದೂ ಇನ್ನೊಬ್ಬರ ಮನೆ ಬಾಗಿಲಿಗೆ ಹೋದವರಲ್ಲ. ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಪ್ರಧಾನಿ ಸ್ಥಾನವನ್ನೇ ತ್ಯಜಿಸಿ ಬಂದವರು," ಎಂದು ನೆನಪಿಸಿದರು. ಕಳೆದ ಬಾರಿ ಕಾಂಗ್ರೆಸ್ ಬೆಂಬಲದಿಂದ ಅವರು ಆಯ್ಕೆಯಾಗಿದ್ದರು ಎಂಬ ವಾದವನ್ನು ತಳ್ಳಿಹಾಕಿದ ಹೆಚ್‌ಡಿಕೆ, "ಅಂದು ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲಲು ಅವಕಾಶವೇ ಇರಲಿಲ್ಲ. ಅವರು ಯಾರದ್ದೋ ದಯೆಯಿಂದ ರಾಜ್ಯಸಭೆಗೆ ಹೋಗಿಲ್ಲ. ರಾಜ್ಯದಲ್ಲಿ ಒಕ್ಕಲಿಗ ಸಿಎಂ ಇರುವಾಗ ಇವರು ರಾಜ್ಯಸಭೆ ಇಟ್ಟುಕೊಂಡು ಏನು ಮಾಡುತ್ತಾರೆ? ಇನ್ನೆರಡು ತಿಂಗಳು ಕಾದು ನೋಡಿ, ಅವರೇನು ಮಾಡುತ್ತಾರೆ ಎಂದು ತಿಳಿಯುತ್ತದೆ," ಎಂದು ಸವಾಲು ಹಾಕಿದರು. ಸಚಿವ ಚಲುವರಾಯಸ್ವಾಮಿ ಅವರ 'ದೇವೇಗೌಡರ ಮನೆಯಲ್ಲಿ ಸೂತಕ' ಎಂಬ ಹೇಳಿಕೆಗೆ ತಾವು ಪ್ರತಿಕ್ರಿಯಿಸುವುದಿಲ್ಲ ಎಂದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕುಮಾರಸ್ವಾಮಿ ಅವರ ಸಲಹೆ ಕೇಳುವುದಾಗಿ ಹೇಳಿರುವ ಕುರಿತು ಕೇಳಲಾದ ಪ್ರಶ್ನೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, "ಅವರೇ ಹಿಂದೆ 'ಕುಮಾರಸ್ವಾಮಿ ಎರಡು ಬಾರಿ ಸಿಎಂ ಆಗಿ ಏನು ಹರಿದಿದ್ದಾರೆ' ಎಂದು ಕೇಳಿದ್ದರು. ಈಗ ಎಲ್ಲದಕ್ಕೂ ಸಾಕ್ಷಿ ಗುಡ್ಡೇ ಕೇಳುತ್ತಾರೆ. ನಾನೇನು ಹರಿದಿಲ್ಲ, ನನ್ನ ಹತ್ತಿರ ಅವರೇಕೆ ಸಲಹೆ ಕೇಳುತ್ತಾರೆ? ಇಂತಹ ವರ್ತನೆಗೆ 'ಅತಿ ವಿನಯಂ ದೂರ್ತ ಲಕ್ಷಣಂ' ಎನ್ನುತ್ತಾರೆ," ಎಂದು ಲೇವಡಿ ಮಾಡಿದರು. ತಮಗೆ ಮುಖ್ಯಮಂತ್ರಿಯಾಗುವುದಕ್ಕಿಂತ ಸದ್ಯದ ಪರಿಸ್ಥಿತಿಯಲ್ಲಿ ಜನರನ್ನು ಉಳಿಸುವುದು ಮುಖ್ಯವಾಗಿದ್ದು, ಮೈತ್ರಿ ಪಕ್ಷಗಳಿಗೆ ಆ ಶಕ್ತಿ ತರುವ ಪ್ರಯತ್ನ ಮಾಡುವುದಾಗಿ ಹೇಳಿದರು.

ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿ ಕಣಕ್ಕಿಳಿಸಿರುವ ಕುರಿತು ಮಾತನಾಡಿದ ಅವರು, "ನಮಗೂ ಎರಡು ಮತಗಳ ಅಗತ್ಯವಿದೆ, ಕಾಂಗ್ರೆಸ್‌ನವರಿಗೂ ಎರಡು ಮತಗಳು ಬೇಕಾಗಿವೆ. ಇದರಲ್ಲಿ ಯಾವುದೇ ಹಿಡನ್ ಗೇಮ್ ಪ್ಲಾನ್ ಇಲ್ಲ. ನಾವು ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಯತ್ನಾಳ್ ಅವರ ಮತವನ್ನು ಕೇಳುತ್ತೇವೆ. ಕಾಂಗ್ರೆಸ್ ನವರ ಬಳಿ ಹಣದ ಬಲವಿದೆ, ಏನಾಗುತ್ತದೋ ಕಾದು ನೋಡೋಣ," ಎಂದರು.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಅನುದಾನದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಪ್ರಥಮ ಆದ್ಯತೆ ನೀಡಲಾಗುವುದು ಮಂಡ್ಯ ಜಿಲ್ಲೆಯ ರಸ್ತೆಗಳ ಅಭಿವೃದ್ಧಿಗಾಗಿ ಈಗಾಗಲೇ 54 ಕೋಟಿ ರೂಪಾಯಿಗಳ ಸಿಎಸ್‌ಆರ್ ಅನುದಾನವನ್ನು ಮೀಸಲಿಡಲಾಗಿದೆ ಎಂದ ಅವರು ಇತ್ತೀಚೆಗೆ ನಡೆದ ವೈಜಾಗ್ (ವಿಶಾಖಪಟ್ಟಣಂ) ಸ್ಟೀಲ್ ಪ್ಲಾಂಟ್ "ದುರಂತದ ಮಾಹಿತಿ ಬಂದ ತಕ್ಷಣವೇ ನಾನು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಮಾಹಿತಿ ಸಂಗ್ರಹಿಸಿದ್ದೇನೆ. ಇದೊಂದು ದುರದೃಷ್ಟಕರ ಆಕಸ್ಮಿಕ ಘಟನೆ. ನಾವು ಎಷ್ಟೇ ಜಾಗರೂಕರಾಗಿ ಕೆಲಸ ಮಾಡಿದರೂ, ಒಮ್ಮೊಮ್ಮೆ ಇಂತಹ ಘಟನೆಗಳು ಸಂಭವಿಸಿಬಿಡುತ್ತವೆ," ಎಂದರು.

ಘಟನೆಯ ತನಿಖೆ ನಡೆಸಿ ವರದಿ ಸಲ್ಲಿಸಲು ತಜ್ಞರ ತಂಡವನ್ನು ರಚಿಸಲಾಗಿದೆ ಎಂದ ಅವರು, ಸಂತ್ರಸ್ತ ಕಾರ್ಮಿಕರ ಪರವಾಗಿ ಮಹತ್ವದ ನಿರ್ಧಾರಗಳನ್ನು ಪ್ರಕಟಿಸಿದರು ಖಾಯಂ ಸಿಬ್ಬಂದಿಗಳಿಗೆ ನೀಡಲಾಗುವ ಮಾದರಿಯಲ್ಲೇ ಹೊರಗುತ್ತಿಗೆ (ಕಾಂಟ್ರಾಕ್ಟ್) ನೌಕರರಿಗೂ ಸಮಾನ ಪರಿಹಾರ ನೀಡಲು ಇಲಾಖೆಗೆ ಸೂಚಿಸಲಾಗಿದೆ. ಗಾಯಾಳುಗಳ ಆಸ್ಪತ್ರೆಯ ಸಂಪೂರ್ಣ ವೆಚ್ಚವನ್ನು ಉಕ್ಕು ಇಲಾಖೆಯೇ ಭರಿಸಲಿದೆ. ನೊಂದ ಕುಟುಂಬಗಳಿಗೆ ಟೌನ್‌ಶಿಪ್‌ನಲ್ಲಿ ಉಚಿತ ಮನೆ ನೀಡಲು ತೀರ್ಮಾನಿಸಲಾಗಿದ್ದು, ಅವರ ಮಕ್ಕಳ ಮುಂದಿನ ಶಿಕ್ಷಣಕ್ಕೂ ಸಂಪೂರ್ಣ ನೆರವು ನೀಡಲಾಗುವುದು ಎಂದರು.

ದೇಶದಲ್ಲಿ ಇಂಧನ ಹಾಗೂ ಗ್ಯಾಸ್ ಬೆಲೆ ಏರಿಕೆಯಾಗುತ್ತಿರುವ ಕುರಿತು ಕಾಂಗ್ರೆಸ್ ಟೀಕೆಗಳಿಗೆ ಉತ್ತರಿಸಿದ ಕುಮಾರಸ್ವಾಮಿ, "ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧಗಳ ಹಿನ್ನೆಲೆಯಲ್ಲಿ ಈ ಬೆಲೆ ಏರಿಕೆಯಾಗಿದೆ. ಇದು ಕೇವಲ ಭಾರತದಲ್ಲಿ ಮಾತ್ರ ಆಗುತ್ತಿಲ್ಲ, ವಿಶ್ವದ ಎಲ್ಲಾ ದೇಶಗಳೂ ಈ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಆದರೆ ಕಾಂಗ್ರೆಸ್‌ನವರು ಕರ್ನಾಟಕದಲ್ಲಿ ಎಲ್ಲದರ ಬೆಲೆಯನ್ನೂ ಏರಿಸಿದ್ದಾರೆ. ಒಂದು ವೇಳೆ ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು?" ಎಂದು ಪ್ರಶ್ನಿಸುವ ಮೂಲಕ ಕಾಂಗ್ರೆಸ್ ನಾಯಕರ ಆರೋಪಗಳಿಗೆ ತಿರುಗೇಟು ನೀಡಿದರು.

## ಯರಮರಸ್ ಗ್ರಾಮದ ಸುರೇಶ ಕಾಣೆ: ಪತ್ತೆಗೆ ಗ್ರಾಮೀಣ ಪೊಲೀಸರ ಮನವಿ

ಧೈರ್ಯದ ದಾರಿ



**ರಾಯಚೂರು ಜೂನ್ 09:** ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯ ಯರಮರಸ್ ಗ್ರಾಮದ ಸುರೇಶ ತಂದೆ ಈರಪ್ಪ ಗೌಡ (32) ಎಂಬ ವ್ಯಕ್ತಿಯು ಜೂನ್ 02ರ ಬೆಳಿಗ್ಗೆ 8ಗಂಟೆಗೆ ಸುಮಾರಿಗೆ ದೇವಸ್ಥಾನಕ್ಕೆ ಹೋಗಿ ಬರುತ್ತೇನೆಂದು ತನ್ನ ಹೆಂಡತಿಗೆ ಹೇಳಿ, ದ್ವಿಚಕ್ರ ವಾಹನ ತೆಗೆದುಕೊಂಡು ಹೋದವನ್ನು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 100/2026 ಕಲಂ ಮನುಷ್ಯ ಕಾಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ನಂತರ ರಾಯಚೂರಿನ ಸಂಕಲ್ಪ ಆಸ್ಪತ್ರೆಯ ಆವರಣದಲ್ಲಿ ತನ್ನ ದ್ವಿಚಕ್ರ ವಾಹನವನ್ನು ಬಿಟ್ಟು ಹೋಗಿದ್ದಾನೆ. ಅಲ್ಲಲ್ಲಿ ಹುಡುಕಾಡಿದರೂ ಇಲ್ಲಿಯವರೆಗೆ ಸಿಗದೇ ಇದ್ದುದರಿಂದ ಕಾಣೆಯಾದ ಕುರಿತು ಈರಪ್ಪ ಗೌಡ ಅವರು ತಡವಾಗಿ ಠಾಣೆಗೆ ಬಂದು ಗಣಕೀಕೃತ ದೂರು ನೀಡಿದ್ದಾರೆ.

ಕಾಣೆಯಾದ ಮನುಷ್ಯನ ಚಹರೆ: ವಯಸ್ಸು 32 ವರ್ಷ, 5.6 ಅಡಿ ಎತ್ತರ, ಉದ್ಯೋಗ ಫೈನಾನ್ಸ್ /ಒಕ್ಕಲುತನ, ಸಾಧಾರಣ ಮೈಕಟ್ಟು, ಗೋದಿ ಮೈ ಬಣ್ಣ, ಚಪ್ಪಟೆ ಮುಖ, ಉದ್ದ ಮೂಗು, ಕಪ್ಪು ಕೂದಲು ಹೊಂದಿದ್ದು, ಬಿಳಿ ಬಣ್ಣದ ಅಂಗಿ, ನೀಲಿ ಬಣ್ಣದ ಜೀನ್ಸ್ ಫ್ಯಾಂಟ್ ಧರಿಸಿದ್ದಾನೆ. ಕನ್ನಡ, ತೆಲುಗು, ಹಿಂದಿ ಭಾಷೆ ಮಾತನಾಡುತ್ತಾನೆ.

ಈ ಮೇಲಿನ ಚಹರೆಯುಳ್ಳ ಮನುಷ್ಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಪಿ.ಎಸ್.ಐ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆ ಮೊಬೈಲ್ ಸಂಖ್ಯೆ: 9480803850, ಸಿಪಿಐ ಗ್ರಾಮೀಣ ವೃತ್ತ ರಾಯಚೂರು ಮೊಬೈಲ್ ಸಂಖ್ಯೆ: 9480803832, ಡಿಎಸ್ಪಿ ರಾಯಚೂರು ಮೊಬೈಲ್ ಸಂಖ್ಯೆ: 9480803820, ರಾಯಚೂರು ಕಂಟ್ರೋಲ್ ರೂಮ್ ದೂರವಾಣಿ ಸಂಖ್ಯೆ: 08532–235635ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಣಿಜ್ಯ ಬಳಕೆಗೆ ಗೃಹ ಅನಿಲ ಬಳಸಿದಲ್ಲಿ ಕ್ರಮ: ಭೀಮರಾಯ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದಲ್ಲಿ ಮಂಗಳವಾರ ಬೆಳಿಗ್ಗೆ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರರವರು ಶ್ರೀನಿಧಿ ಭಾರತ ಗ್ಯಾಸ್ ಏಜೇನ್ಸಿರವರ ಅಡುಗೆ ಆನಿಲ ಸಿಲೆಂಡರ್ ಪೂರೈಕೆ ಗೋಡನ್‌ಗೆ ತೆರಳಿ ಅಡುಗೆ ಆನಿಲ ಸಿಲೆಂಡರ್ ಹಾಗೂ ವಾಣಿಜ್ಯ ಬಳಕೆ ಸಿಲೆಂಡರ್‌ಗಳನ್ನು ಪರಿಶೀಲಿಸಿ ಮಾತನಾಡಿ ಪಟ್ಟಣದಲ್ಲಿನ ಹೆಚ್ಚಿನ ಹೋಟೆಲ್ ಹಾಗೂ ಡಾಬಗಳಲ್ಲಿ ಟಿ.ಅಂಗಡಿಗಳಲ್ಲಿ ಹೆಚ್ಚಾಗಿ ನಿಯಮದ ಪ್ರಕಾರ ವಾಣಿಜ್ಯ ಅನಿಲ ಸಿಲೆಂಡರೆ ಬಳಸದೆ ಸಾರ್ವಜನಿಕರಿಗೆ ಪೂರೈಸುವ ಅಡುಗೆ ಆನಿಲ ಸಿಲೆಂಡರ್‌ಗಳನ್ನು ಬಳಸುತ್ತಿರುವುದರಿಂದ ಜನರಿಗೆ ಅಡುಗೆ ಆನಿಲ ಕೊರತೆಯಾಗುತ್ತಿದೆ ಗ್ಯಾಸ್ ಏಜನ್ಸಿಯವರು ಹೋಟೆಲ್ ಮತ್ತು ಡಾಬಗಳಿಗೆ ಗೃಹ ಬಳಕೆ ಆಡುಗೆ ಆನಿಲವನ್ನು ಪೂರೈಸಿದಲ್ಲಿ ನಿಮ್ಮ ಏಜನ್ಸಿ ಮೇಲೆ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.ಪಟ್ಟಣದಲ್ಲಿನ ವಿವಿಧ ಹೋಟೆಲ್ ಹಾಗೂ ಡಾಬಗಳ ಮೇಲೆ ದಾಳಿ ನಡೆಸಿ ಅಡುಗೆಗೆ ಬಳಸುವ ಸಿಲೆಂಡರ್ ಗಳನ್ನು ವಾಣಿಜ್ಯ ಉದ್ದೇಶಕ್ಕೆ ಹೋಟೆಲ್ ಗಳಲ್ಲಿ ಬಳಸುತ್ತಿರುವುದನ್ನು ಪತ್ತೆ ಹಚ್ಚಿ 15 ಅಡುಗೆ ಆನಿಲ ಸಿಲೆಂಡರ್‌ಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ತಾಲೂಕು ಆಹಾರ ನಿರೀಕ್ಷಕರಾದ ದೇವರಾಜ ಹಾಗೂ ಸಿಬ್ಬಂದಿಗಳು ಇದ್ದರು.

## ಮೇ, ಜೂನ್ ಮಾಹೆಗೆ ಪಡಿತರ ಧಾನ್ಯ ವಿತರಣೆ: ಜಿಲ್ಲಾಧಿಕಾರಿ ಪೂವಿತಾ ಎಸ್.

ಧೈರ್ಯದ ದಾರಿ



**ರಾಯಚೂರು ಜೂನ್ 09:** ರಾಯಚೂರಿನ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2026ರ ಮೇ ಮತ್ತು ಜೂನ್ ಮಾಹೆಗೆ ಪಡಿತರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನ 'ಯಡಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲು ಸರ್ಕಾರವು ನಿರ್ದೇಶಿಸಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ಮಾರ್ಗ ಸೂಚಿಯಂತೆ ಏಕ ಸದಸ್ಯ, ದ್ವಿ–ಸದಸ್ಯ ಮತ್ತು ತ್ರಿ–ಸದಸ್ಯ ಫಲಾನುಭವಿಗಳಿರುವ ಎಎವೈ ಪಡಿತರ ಚೀಟಿಗಳನ್ನು ಹೊರತು ಪಡಿಸಿ ನಾಲ್ಕು ಮತ್ತು ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಕೇಂದ್ರ ಹಾಗೂ ರಾಜ್ಯ ವ್ಯಾಪ್ತಿಯ ಅಂತ್ಯೋದಯ (ಎಎವೈ) ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 2026ರ ಮೇ ಮಾಹೆಯ 05 ಕೆ.ಜಿ ಮತ್ತು 2026ರ ಜೂನ್ ಮಾಹೆಯ 05 ಕೆ.ಜಿ ಅಕ್ಕಿ ಹೀಗೆ ಒಟ್ಟು 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು.ಪಡಿತರ ಚೀಟಿದಾರರು ಪಡಿತರ ಪಡೆಯುವ ಸಮಯದಲ್ಲಿ ಒಂದೇ ಬಾರಿ ಬಯೋಮೆಟ್ರಿಕ್ ನೀಡುವುದು ಮತ್ತು ಅನ್ನಸುವಿಧಾ ಯೋಜನೆಯ ಪಡಿತರ ಫಲಾನುಭವಿಗಳು 2026ರ ಜೂನ್ ಮಾಹೆಯಲ್ಲಿ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಒಂದು ಬಾರಿ ಬಯೋಮೆಟ್ರಿಕ್ ನೀಡಿ ಪಡಿತರವನ್ನು ಪಡೆದುಕೊಳ್ಳಬಹುದಾಗಿದೆ.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ/ ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಯಾವುದೇ ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ದೂರವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಛೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಛೇರಿಗೆ ದೂರನ್ನು ಸಲ್ಲಿಸಬಹುದಾಗಿದೆ.ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಮತ್ತು ಈ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾಗುವುದು.ವಿಶೇಷ ಗಮನಕ್ಕೆ: ಏಕ ಸದಸ್ಯ, ದ್ವಿ–ಸದಸ್ಯ ಮತ್ತು ತ್ರಿ–ಸದಸ್ಯ ಫಲಾನುಭವಿಗಳಿರುವ ಎಎವೈ ಪಡಿತರ ಚೀಟಿಗಳಿಗೆ 2026ರ ಜೂನ್ ಮಾಹೆಯಲ್ಲಿ ಹಂಚಿಕೆಯು ಇರುವುದಿಲ್ಲ. 2026ರ ಮೇ ಮತ್ತು ಜೂನ್ ಮಾಹೆಯ ಅನ್ನಭಾಗ್ಯ ಯೋಜನೆಯಡಿ ವಿತರಿಸಲಾಗುವ 10 ಕೆಜಿ ಅಕ್ಕಿಯನ್ನು ಪಡೆಯಲು ಒಂದೇ ಬಾರಿ ಬಯೋಮೆಟ್ರಿಕ್ ದೃಢೀಕರಣ ನೀಡಿ ಪಡೆಯಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಪರಿಚಿತ ವ್ಯಕ್ತಿ ಮೃತ: ಸಂಬಂಧಿಕರ ಪತ್ತೆಗೆ ರೈಲ್ವೇ ಪೊಲೀಶರ ಮನವಿ

ಧೈರ್ಯದ ದಾರಿ



**ರಾಯಚೂರು ಜೂನ್ 09:** ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ಮಟಮಾರಿ ರೈಲು ನಿಲ್ದಾಣದ ಹತ್ತಿರ ಡೌನ್ ಮೇಲ್ ಲೈನ್ ರೈಲು ಹಳಿಯಲ್ಲಿ ಜೂನ್ 06ರ ಬೆಳಿಗ್ಗೆ 7.50ಗಂಟೆಗೆ ರೈಲ್ವೇ ಕೀ.ಮೀ ನಂ 546/40–42 ನೇದ್ದರಲ್ಲಿ ಸುಮಾರು 40 ವರ್ಷ ವಯಸ್ಸಿನ ಅಪರಿಚಿತ ಗಂಡಸ್ಸು ಮೃತಪಟ್ಟಿದ್ದು, ಈ ಕುರಿತು ರಾಯಚೂರಿನ ರೈಲ್ವೇ ಪೊಲೀಸ ಠಾಣೆಯಲ್ಲಿ ಯು.ಡಿ.ಆರ್. ನಂ 27/2026 ಕಲಂ 194 ಬಿ.ಎನ್.ಎಸ್.ಎಸ್. ರಿತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಮೃತದೇಹ ದೊರೆತ ಘಟನಾ ಸ್ಥಳಗಳಲ್ಲಿ ಮೃತನ ವಾರಸುದಾರರು ಯಾರು ಪತ್ತೆಯಾಗಿರುವುದಿಲ್ಲ. ಆದ್ದರಿಂದ ಮೃತನ ವಾರುಸುದಾರ ಪತ್ತೆ ಹಾಗೂ ಪಿ.ಎಂ.ಇ. ಸಲುವಾಗಿ ಮೃತದೇಹವನ್ನು ರಾಯಚೂರು ರಿಮ್ಸ್ ಆಸ್ಪತ್ರೆಯ ಶೀತಲ ಶವಗಾರದಲ್ಲಿ ಇಡಲಾಗಿದೆ.

ಮೃತ ವ್ಯಕ್ತಿಯ ಚಹರೆ: ಅಪರಿಚಿತ ಗಂಡಸ್ಸು ವಯಸ್ಸು ಸುಮಾರು 40 ವರ್ಷ, ಎತ್ತರ ಸುಮಾರು 5.4 ಅಡಿ, ಗೋಧಿ ಮೈ ಬಣ್ಣ, ದುಂಡು ಮುಖ, ಕಪ್ಪು ಕಣ್ಣುಗಳು, ಕಪ್ಪು ಮೀಸೆ ಹೊಂದಿರುತ್ತಾನೆ, ಸದೃಡ ಶರೀರ ಮತ್ತು ಬೋಳು ತಲೆ ಹೊಂದಿರುತ್ತಾನೆ. ಒಂದು ಬಿಳಿ ಬಣ್ಣದ ತುಂಬು ತೋಳಿನ ಶರ್ಟ, ಒಂದು ಗ್ರೇ ಬಣ್ಣದ ಪ್ಯಾಂಟ್, ಒಂದು ನೀಲಿ ಬಣ್ಣದ ಅಂಡರ್ ವೇರ್ ಧರಿಸಲಾಗಿದೆ.

ಈ ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತನ ಹೋಲಿಕೆಯ ಪುರುಷ ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂ.ನಂ: 08532–231716 ಅಥವಾ ಮೊ.ನಂ:9480802111 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080–22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳಿಗೆ ಜೂನ್ 20ರಂದು ಮಾಹಿತಿ ಹಕ್ಕು ಕಾಯ್ದೆಯ ಕುರಿತು ಕಾರ್ಯಾಗಾರ: ಆಯುಕ್ತರಾದ ಬಿ.ವೆಂಕಟ ಸಿಂಗ್

ಧೈರ್ಯದ ದಾರಿ



**ರಾಯಚೂರು ಜೂನ್ 09:** ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ ಸಿಂಗ್ ಹಾಗೂ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತರುಗಳಾದ ರಾಮನ್ ಕೆ. ಹಾಗೂ ಡಾ.ರಿಚರ್ಡ್ ವಿನ್ಸೆಂಟ್ ಡೊಸೋಜ ಇವರುಗಳು ದಿನಾಂಕ:20–06–2026(ಶನಿವಾರ ) ರಂದು ರಾಯಚೂರು ಜಿಲ್ಲೆಗೆ ಆಗಮಿಸುತ್ತಿದ್ದು, ಸದರಿ ದಿನದಂದು ರಾಯಚೂರು ಜಿಲ್ಲೆಯ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯ, ಕಂದಾಯ ಇಲಾಖೆಯ ಮತ್ತು ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು, ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಕಾರ್ಯಾಗಾರ ಹಾಗೂ ಸಂವಾದ ನಡೆಸಲು ಉದ್ದೇಶಿಸಲಾಗಿದೆ.ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಥವಾ ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಈ ಕಾರ್ಯಾಗಾರಕ್ಕೆ ಮೇಲ್ಕಾಣಿಸಿದ ಎಲ್ಲಾ ಅಧಿಕಾರಿಗಳು ತಪ್ಪದೇ ಹಾಜರಾಗುವಂತೆ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ ಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ಆಸ್ಪತ್ರೆ ವಿರುದ್ಧ ವೈದ್ಯಕೀಯ ನಿರ್ಲಕ್ಷ್ಯ, ಲಂಚ ಆರೋಪ: ತನಿಖೆಗೆ ಒತ್ತಾಯ



ಧೈರ್ಯದ ದಾರಿ

**ಲಿಂಗಸುಗೂರು :** ಸಾರ್ವಜನಿಕ ಆಸ್ಪತ್ರೆಯಲ್ಲಿ ಹೆರಿಗೆ ಶಸ್ತ್ರಚಿಕಿತ್ಸೆ ವೇಳೆ ವೈದ್ಯಕೀಯ ನಿರ್ಲಕ್ಷ್ಯ, ಲಂಚ ವಸೂಲಿ, ಕರ್ತವ್ಯ ಲೋಪ ಹಾಗೂ ಜಾತಿ ತಾರತಮ್ಯ ನಡೆದಿದೆ ಎಂದು ಆರೋಪಿಸಿ ದಲಿತ ಮುಖಂಡರು ಮತ್ತು ಸಮಾಜ ಸೇವಕರು ಸಹಾಯಕ ಆಯುಕ್ತರಿಗೆ ಮನವಿ 2ನೇಪುಟಕ್ಕೆ


ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

ಮೊದಲನೇ ಪುಟದಿಂದ

# ಸರ್ಕಾರಿ ಆಸ್ಪತ್ರೆ ವಿರುದ್ಧ ವೈದ್ಯಕೀಯ ನಿರ್ಲಕ್ಷ್ಯ, ಲಂಚ ಆರೋಪ: ತನಿಖೆಗೆ ಒತ್ತಾಯ

ಸಲ್ಲಿಸಿ ಒತ್ತಾಯಿಸಿದರು. ಮಾರಲದಿನ್ನಿ ತಾಂಡಾದ ಅನ್ನಪೂರ್ಣ ಎಂಬ ಮಹಿಳೆಗೆ ಹೆರಿಗೆ ಶಸ್ತ್ರಚಿಕಿತ್ಸೆ ನಡೆಸಿದ ಬಳಿಕ ಕೇವಲ ಮೂರು ದಿನಗಳಲ್ಲಿ ಹೊಲಿಗೆಗಳು ಬಿಚ್ಚಿಕೊಂಡಿದ್ದು, ಇದರಿಂದ ಗಂಭೀರ ಆರೋಗ್ಯ ಸಮಸ್ಯೆ ಎದುರಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಶಸ್ತ್ರಚಿಕಿತ್ಸೆಗಾಗಿ 15 ಸಾವಿರ ಲಂಚ ಪಡೆದಿರುವ ಆರೋಪವನ್ನೂ ವೈದ್ಯರ ವಿರುದ್ಧ ಮಾಡಲಾಗಿದೆ.

ಸರ್ಕಾರಿ ಆಸ್ಪತ್ರೆಯ ನಿರ್ಲಕ್ಷ್ಯದಿಂದಾಗಿ ರೋಗಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಬೇಕಾಗಿ ಬಂದಿದ್ದು, ಇದುವರೆಗೆ ಸುಮಾರು 5 ಲಕ್ಷಕ್ಕೂ ಅಧಿಕ ವೆಚ್ಚವಾಗಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳು ಸಹ ಬೇಜವಾಬ್ದಾರಿಯಾಗಿ ವರ್ತಿಸಿ ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಪ್ರಕರಣದ ಕುರಿತು ಉನ್ನತ ಮಟ್ಟದ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥ ವೈದ್ಯರು ಹಾಗೂ ಸಿಬ್ಬಂದಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಅಲ್ಲದೆ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಉಚಿತ ಚಿಕಿತ್ಸೆ ಒದಗಿಸಬೇಕು ಎಂದು ಮನವಿ ಮಾಡಲಾಗಿದೆ.

ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಆಸ್ಪತ್ರೆ ಹಾಗೂ ಸಹಾಯಕ ಆಯುಕ್ತರ ಕಚೇರಿ ಎದುರು ಹೋರಾಟ ನಡೆಸುವುದಾಗಿ ದಲಿತ ಮುಖಂಡರಾದ ಮೌನೇಶ್ ನಾಯಕ್, ಶಿವಾರೆಡ್ಡಿ, ಭೀಮೇಶ್ ಹಾಗೂ ಧನರಾಜ್ ಮಾರಲದಿನ್ನಿ ಎಚ್ಚರಿಕೆ ನೀಡಿದ್ದಾರೆ.

# ವಿಶ್ವ ಯೋಗ ದಿನಾಚರಣೆಗೆ ಸಕಲ ಸಿದ್ಧತೆ : ಶಾಸಕ ಲಕ್ಷ್ಮಣ ಸವದಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ



**ಅಥಣಿ :ಜೂ.9:** ಯಾವುದೇ ಜಾತಿ ಮತ ಪಂಥ ಧರ್ಮವೆನ್ನದೆ ಕಲುಷಿತ ಗಾಳಿ, ನೀರು, ಆಹಾರ ಸೇವಿಸುವ ಪ್ರತಿಯೊಬ್ಬ ಮನುಷ್ಯನಿಗೆ ಇಂದು ಯೋಗ ಅಗತ್ಯವಾಗಿಬೇಕು. ಆರೋಗ್ಯಪೂರ್ಣ ಸಮಾಜದ ನಿರ್ಮಾಣ ನಮ್ಮೆಲ್ಲರ ಆದ್ಯತೆಯಾಗಬೇಕು.

ಪ್ರತಿಯೊಬ್ಬ ವ್ಯಕ್ತಿಯು ಉತ್ತಮ ಆರೋಗ್ಯ ಹೊಂದಲಿ ಎಂಬ ಉದ್ದೇಶದಿಂದ ಅಥಣಿ ಪಟ್ಟಣದಲ್ಲಿ ಜೂನ್ 21ರಂದು ವಿಶ್ವ ಯೋಗ ದಿನವನ್ನು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಮಾಜಿ ಉಪಮುಖ್ಯಮಂತ್ರಿ ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅಥಣಿಯಲ್ಲಿ ಜೂನ್ 21 ರಂದು ನಡೆಯಲಿರುವ 'ಅಂತರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ'ಯ ಹಿನ್ನಲೆಯಲ್ಲಿ ಅಥಣಿ ಶಾಸಕ ಲಕ್ಷ್ಮಣ ಸವದಿಯವರ ಅಧ್ಯಕ್ಷತೆಯಲ್ಲಿ ತಾಲೂಕು ಆಡಳಿತ ಹಾಗೂ ಅಥಣಿ ಪತಂಜಲಿ ಯೋಗ ಸಮಿತಿಯ ಸಹಯೋಗದೊಂದಿಗೆ ಯೋಗ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು ವಿಶೇಷ ಪೂರ್ವಭಾವಿ ಸಭೆ ಜರುಗಿತು.

ಅಥಣಿಯಲ್ಲಿ ಅರ್ಥಪೂರ್ಣ ಹಾಗೂ ವೈಭವಯುತವಾಗಿ ಪ್ರತಿಯೊಬ್ಬರ ಸಹಯೋಗದೊಂದಿಗೆ ಯೋಗ ದಿನ ಆಚರಿಸಲು ನಿರ್ಧರಿಸಲಾಯಿತು.

ಕಳೆದ ಬಾರಿ ಸುಮಾರು ನಾಲ್ಕು ಸಾವಿರ ಜನರ ಸಹಯೋಗದೊಂದಿಗೆ ಬೃಹತ್ ಕಾರ್ಯಕ್ರಮ ಯಶಸ್ವಿಯಾಗಿ ಹಮ್ಮಿಕೊಂಡಿದ್ದೆವು. ಈ ವರ್ಷವೂ ಕೂಡ ಕಾರ್ಯಕ್ರಮಕ್ಕೆ ಅಗತ್ಯವಿರುವ ವೇದಿಕೆ ಸಿದ್ಧತೆ, ಧ್ವನಿವರ್ಧಕ, ಎಲ್ಇಡಿ ಸ್ಕ್ರೀನ್ ಅಳವಡಿಕೆ ವಿವಿಧ ರೀತಿಯ ಉಪಹಾರ ವ್ಯವಸ್ಥೆ ಚಹಾ ಪಾನೀಯ ಸಂಪೂರ್ಣ ಸಹಕಾರವನ್ನು ನಾನು ನೀಡುತ್ತೇನೆ ಎಂದು ಶಾಸಕ ಲಕ್ಷ್ಮಣ ಸವದಿ ಅವರು ಅಭಯ ಹಸ್ತವನ್ನು ನೀಡಿದರು.

"ಯೋಗವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ ಮತ್ತು ಆರೋಗ್ಯಕರ ಜೀವನಶೈಲಿಗೆ ಯೋಗ ಅಗತ್ಯ ಅಥಣಿಯಲ್ಲಿ ಈ ಬಾರಿಯ ವಿಶ್ವ ಯೋಗ ದಿನವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಅತ್ಯಂತ ಶಿಸ್ತುಬದ್ಧವಾಗಿ ಆಚರಿಸಬೇಕು" ಎಂದು ಕರೆ ನೀಡಿದರು.

ಸಭೆಯ ಪ್ರಮುಖ ನಿರ್ಣಯಗಳು:

ವ್ಯಾಪಕ ಪ್ರಚಾರ: ಯೋಗ ದಿನಾಚರಣೆಯ ಬಗ್ಗೆ ಯುವಜನತೆ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳು,ತಾಲೂಕು ಪತ್ರಕರ್ತರ ಸಂಘ, ಶಿಕ್ಷಣ, ಕಂದಾಯ, ಪೊಲೀಸ್, ಸೇರಿದಂತೆ ತಾಲೂಕ ಆಡಳಿತದ ಎಲ್ಲ ಇಲಾಖೆಗಳು ಸಹಭಾಗಿತ್ವ ಜೊತೆಗೆ ಬ್ಯಾಂಕುಗಳು, ಸಾಹಿತಿಗಳು, ಕನ್ನಡಪರ ಸಂಘಟನೆಗಳು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೆಚ್ಚಿನ ಒತ್ತು ನೀಡಲಾಗುವುದು.

ಸಮಿತಿಗಳ ರಚನೆ: ಕಾರ್ಯಕ್ರಮದ ಸುಗಮ ನಿರ್ವಹಣೆಗಾಗಿ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಪತಂಜಲಿ ಯೋಗ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಯಿತು.

ಭಾಗವಹಿಸುವಿಕೆ: ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು, ಯೋಗಪಟುಗಳು ಮತ್ತು ವಿವಿಧ ಸಂಘಟನೆಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಲು ನಿರ್ಧರಿಸಲಾಯಿತು.

ಸ್ಥಳ ಮತ್ತು ಸಮಯ: ಸ್ಥಳೀಯ ಎಸ್ ಎಸ್ ಎಮ್ ಎಸ್ ಸಂಸ್ಥೆಯ ಆವರಣದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸ ಲಾಯಿತು. ಶೀಘ್ರವೇ ಅಂತಿಮ ನಿರ್ಧಾರ ಕೈಗೊಂಡು ಸಾರ್ವಜನಿಕರಿಗೆ ಮಾಹಿತಿ ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

ಪತಂಜಲಿ ಯೋಗ ಸಮಿತಿಯ ತಾಲೂಕು ಪ್ರಭಾರಿ ಎಸ್ ಕೆ ಹೊಳೆಪ್ಪನವರ ಹಾಗೂ ವಿವಿಧ ಪದಾಧಿಕಾರಿಗಳು ಮಾತನಾಡಿ, ಯೋಗ ದಿನಾಚರಣೆಯ ಅಂಗವಾಗಿ ತರಬೇತಿ ಶಿಬಿರಗಳನ್ನು ಆಯೋಜಿಸಲು ಸಿದ್ಧತೆ ನಡೆಸಿರುವುದಾಗಿ ತಿಳಿಸಿದರು.

ಶಾಸಕರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಮಿತಿಯು ಸಂಪೂರ್ಣ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಸುರೇಶ ಚಿಕ್ಕಟ್ಟಿ ಸ್ವಾಗತಿಸಿ ಕಾರ್ಯಕ್ರಮ ಕುರಿತು ಮಾತನಾಡಿದರು.ತಾಲೂಕು ಪ್ರಭಾರಿ ಎಸ್.ಕೆ. ಹೊಳೆಪ್ಪನವರ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ಕಳೆದ ಬಾರಿ ಮಾನ್ಯ ಶಾಸಕರಾದ ಲಕ್ಷ್ಮಣ ಸವದಿ ಅವರ ಸಂಪೂರ್ಣ ಸಹಕಾರದಿಂದ ಕಾರ್ಯಕ್ರಮ ತುಂಬಾ ಯಶಸ್ವಿಯಾಯಿತು ಅವರ ಸಹಕಾರವನ್ನು ಯೋಗ ಸಮಿತಿ ಎಂದಿಗೂ ಮರೆಯಲು ಸಾಧ್ಯವಿಲ್ಲ.

ಈ ವರ್ಷವೂ ವಿಜೃಂಭಣೆಯಿಂದ ಅರ್ಥಪೂರ್ಣ ಕಾರ್ಯಕ್ರಮ ಆಚರಿಸಲು ಶಾಸಕರ ಸಹಕಾರ ತುಂಬಾ ಇದೆ ಇಂಥ ಶಾಸಕರು ನಮಗೆ ದೊರೆತಿರುವುದು ನಮ್ಮ ಪುಣ್ಯ ಎಂದು ಹೇಳಿ ಕಾರ್ಯಕ್ರಮದ ಸಂಪೂರ್ಣ ವಿವರಣೆಯನ್ನು ನೀಡಿದರು.ರಾಜ್ಯ ಕಿಸಾನ್ ಸೇವಾ ಪ್ರಭಾರಿ ಸಂಜಯ ಕುಸ್ತಿಗಾರ, ಜಿಲ್ಲಾ ಕಿಸಾನ್ ಪ್ರಭಾರಿ ಶಿವಾನಂದ ಬುರ್ಲಿ,ನಾಗೇಂದ್ರ ಭಟ್, ಶಂಕರ ಮಟ್ಟೆಪ್ಪನವರ, ಕಾರ್ಯಕ್ರಮದ ಕುರಿತ ವಿಚಾರಗಳನ್ನು ಹಂಚಿಕೊಂಡರು.

ಈ ಸಭೆಯಲ್ಲಿ ರಾಜ್ಯ ಕಿಸಾನ್ ಸೇವಾ ಪ್ರಭಾರಿ ಸಂಜಯ ಕುಸ್ತಿಗಾರ, ಜಿಲ್ಲಾ ಕಿಸಾನ್ ಪ್ರಭಾರಿ ಶಿವಾನಂದ ಬುರ್ಲಿ, ಜಿಲ್ಲಾ ಮಹಿಳಾ ಪ್ರಭಾರಿ ಸುರೇಖಾ ತಾಂಬಟ, ನಾಗೇಂದ್ರ ಭಟ್, ಯೋಗ ಗುರುಗಳಾದ ಎ.ಬಿ. ಪಾಟೀಲ್, ತಾಲೂಕು ಪ್ರಭಾರಿ ಎಸ್.ಕೆ. ಹೊಳೆಪ್ಪನವರ, ಯುವ ಪ್ರಭಾರಿ ಶ್ರೀಶೈಲ ಪಾಟೀಲ್, ಡಾ. ವಿನಾಯಕ ಚಿಂಚೋಳಿಮಠ, ಮುಖಂಡರಾದ ಸುರೇಶ ಚಿಕ್ಕಟ್ಟಿ, ರಾಮಣ್ಣ ಧರಿಗೌಡರ, ಎಸ್.ಎಸ್. ಗೊರಜನಾಳ, ಡಾ. ಆರ್ ಎಸ್ ದೊಡ್ಡನಿಂಗಪ್ಪಗೋಳ, ವಿಕಾಸ ತಾಂಬಟ ಸೇರಿದಂತೆ ಅನೇಕ ಮುಖಂಡರು ಮತ್ತು ಪತಂಜಲಿ ಯೋಗಸಮಿತಿಯ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

# ಸಾರಿಗೆ ಇಲಾಖೆ: ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ

**ರಾಯಚೂರು ಜೂನ್ 09:** ಸಾರಿಗೆ ಇಲಾಖೆಯಲ್ಲಿ 1991 ರಿಂದ 20220 ಅವಧಿಯಲ್ಲಿ ಮೋಟಾರು ವಾಹನ ಕಾಯ್ದೆ/ನಿಯಮಗಳ ಉಲ್ಲಂಘನೆ ಸಂಬಂಧ ದಾಖಲಾಗಿ, ಬಾಕಿ ಇರುವ ಡಿ.ಎಸ್.ಎ. ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ದಿನಾಂಕ:21-06-2026 ರಿಂದ 10-07-2026ರವರೆಗೆ ಕಾಲವಾಕಾಶ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ವಾಹನ ಮಾಲೀಕರುಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ರಾಯಚೂರಿನ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಮಹಾನಗರ ಪಾಲಿಕೆ: ಬೃಹತ್ ಘನತ್ಯಾಜ್ಯ ನಿರ್ವಹಣಾ ಕರ್ತವ್ಯ

ರಾಯಚೂರು ಜೂನ್ 09: ಸರ್ಕಾರದ ಅಧಿಸೂಚಿಸಿದ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2016ರ ಘನತ್ಯಾಜ್ಯೋತ್ಪಾದಕರು ಮತ್ತು ನಿರ್ಧಿಷ್ಟ ಪಡಿಸಿದ ನೂತನ ನಿರ್ಮಾಣಗಳನ್ನು ಕೈಗೊಳ್ಳುವವರು ಕೆಲವು ಇದು ಬೃಹತ್ ಘನತ್ಯಾಜ್ಯ ನಿರ್ವಹಣಾ ಕರ್ತವ್ಯಗಳನ್ನು ತಾವೇ ನಿರ್ವಹಿಸಬೇಕೆಂದು ಕಡ್ಡಾಯಪಡಿಸುತ್ತದೆ.

ಯಾವುದೇ ನಿಯಮದಲ್ಲಿ/ಉಪಬಂಧದಲ್ಲಿ ಏನೇ ಒಳಗೊಂಡಿದ್ದಾಗೂ ಸಹ ರಾಯಚೂರು ಮಹಾನಗರ ಪಾಲಿಕೆಯು ದಿನವೊಂದಕ್ಕೆ 100 ಕೆ.ಜಿ ಅಥವಾ ಅದಕ್ಕೂ ಹೆಚ್ಚಿನ ಘನತ್ಯಾಜ್ಯವನ್ನು ಉತ್ಪಾದಿಸುವಂತಹ ಉತ್ಪಾದಕರುಗಳು (ಎಲ್ಲಾ ತ್ಯಾಜ್ಯ ಮೂಲಗಳಿಂದ) ಅಥವಾ 5000 ಚದರ ಮೀಟರುಗಳು ಅಥವಾ ಅದಕ್ಕೂ ಹೆಚ್ಚಿನ ಪ್ರದೇಶವನ್ನು ಹೊಂದಿರುವಂತಹ ರಕ್ಷಿತ (ಗೇಟೆಡ್) ಸಮುದಾಯಗಳು, ಕಾರ್ಪೊರೇಟ್ ಆವರಣಗಳು, ತಂತ್ರಜ್ಞಾನ ಪಾರ್ಕ್‌ಗಳು ಮತ್ತು ಸಂಸ್ಥೆಗಳೆಂದು ಪರಿಭಾಷಿಸಲಾದ ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರು ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2016 ಮತ್ತು ಅದರನ್ವಯ ರಾಯಚೂರು ಮಹಾನಗರ ಪಾಲಿಕೆಯು ಅಧಿಸೂಚಿಸಿದ ಉಪವಿಧಿಗಳ ಉಪಬಂಧಗಳ ಅನ್ವಯ ಜೈವಿಕವಾಗಿ ಕೊಳೆಯಬಹುದಾದ ತ್ಯಾಜ್ಯಗಳನ್ನು ಮೂಲದಲ್ಲಿಯೇ ಮತ್ತು ಆವರಣದೊಳಗೆ ಸಂಸ್ಕರಿಸುವ ಮತ್ತು ನಿರ್ವಹಿಸುವ ಮೂಲಕ 3 (ಮೂರು) ಪ್ರವರ್ಗ/ರೀತಿಯಲ್ಲಿ (ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳು, ಕೊಳೆಯಲಾರದಂತಹ ಜೈವಿಕರಹಿತ ತ್ಯಾಜ್ಯಗಳು ಮತ್ತು ಗ್ರಹೋತ್ಪಾದಕ ಹಾನಿಕಾರಕ ತ್ಯಾಜ್ಯಗಳು) ಘನತ್ಯಾಜ್ಯವನ್ನು ಬೇರ್ಪಡಿಸುವುದನ್ನು ಒಳಗೊಂಡಿದೆ.

ಈ ನೋಟೀಸು ಜಾರಿಯಾದ ದಿನಾಂಕದಿಂದ 60 ದಿನಗಳಿಗಿಂತ ಹೆಚ್ಚಾಗದ ಅವಧಿಯೊಳಗೆ ಅನುಷ್ಠಾನಗೊಳಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತದೆ.

ಸವಿವರವಾದ ಸೂಚನೆಗಳು, ಉಪವಿಧಿಗಳಲ್ಲಿ ಲಭ್ಯವಿರುತ್ತದೆ. ಪರಿಭಾಷಯಡಿಯಲ್ಲಿ ಬರುವಂತಹ ಎಲ್ಲಾ ತ್ಯಾಜ್ಯೋತ್ಪಾದಕರೂ ಸಹ ಅವರುಗಳು ನೋಟೀಸನ್ನು ಜಾರಿ ಮಾಡಿದ ಅವಧಿಯೊಳಗೆ, ಪ್ರತಿ ದಿನವೊಂದಕ್ಕೆ ಅವರುಗಳು ತಮ್ಮ ಆವರಣದಿಂದ 100 ಕೆಜಿಗಿಂತ ಕಡಿಮೆ ತ್ಯಾಜ್ಯವನ್ನು ಉತ್ಪಾದಿಸುತ್ತಿರುವರೆಂದು ಸ್ವಯಂ ಘೋಷಣೆಯನ್ನು ಸಲ್ಲಿಸದ ಹೊರತು ಅವರನ್ನು ಅದೇ ರೀತಿಯಲ್ಲಿಯೇ ಬೃಹತ್ ತ್ಯಾಜ್ಯೋತ್ಪಾದಕರ ವರ್ಗೀಕರಿಸಲಾಗುವುದು.

ಅಂತಹ ಸ್ವಯಂ ಘೋಷಣೆಯು ಪರಿಶೀಲನೆಗೆ ಒಳಪಡತಕ್ಕದು, ಮತ್ತು ಒಂದು ವೇಳೆ ಅದು ಸುಳ್ಳೆಂದು ಕಂಡುಬಂದರ ಸ್ವಯಂ ಘೋಷಣೆಯನ್ನು ಪರಿಶೀಲನೆ ಮಾಡುವ ಸಲುವಾಗಿ ನೋಟೀಸನ್ನು ಜಾರಿಗೊಳಿಸಿದ 20 ದಿವಸಗಳೊಳಗೆ ಅನ್ವಯವಾಗುವಂತಹ ರಾಯಚೂರು ಮಹಾನಗರ ಪಾಲಿಕೆಗೆ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರ ಕಳುಹಿಸಲಾಗುವ/ಸಲ್ಲಿಸಲಾಗುವ ದಂಡಕ್ಕೆ ಸ್ವಯಂಘೋಷಣೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

ಈ ನೋಟೀಸನ್ನು ಜಾರಿಗೊಳಿಸಲಾದ 30 ದಿನಗಳ ನಂತರ ಬೃಹತ್ ತ್ಯಾಜ್ಯೋತ್ಪಾದಕರುಗಳು ಘನ ತ್ಯಾಜ್ಯ ನಿರ್ವಹಣೆ ನಿಯಮಗಳು 2016ರ ಮತ್ತು ಅಥವಾ ಈ ಉಪವಿಧಿಗಳನ್ನು ಉಲ್ಲಂಘಿಸಿದಲ್ಲಿ ಅವರಿಗೆ ರಾಯಚೂರು ಮಹಾನಗರ ಪಾಲಿಕೆಗಳ ಉಪವಿಧಿಗಳಡಿಯಲ್ಲಿ ನಮೂದಿಸಲಾದ ಅನ್ವಯವಾಗಬಹುದಾದ ದಂಡದ ದರಗಳನ್ನು ಅಥವಾ ಜುಲ್ಮಾನೆಗಳನ್ನು ವಿಧಿಸಲಾಗುವುದು.

ಆ ತರುವಾಯದ ದಿನಾಂಕದಲ್ಲಿ ಈ ಘೋಷಣೆಯು ಸುಳ್ಳೆಂದು ಕಂಡು ಬಂದಲ್ಲಿ, ಮಹಾನಗರ ಪಾಲಿಕೆಯ ಉಪವಿಧಿಗಳ ಅನುಸಾರ ದಂಡವನ್ನು ವಿಧಿಸಲಾಗುವುದು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರಿಶ್ರಮವೇ ಶಿಕ್ಷಣದ ಸಾಧನೆ ಗುರಿ



**ಬೀದರ: ಜೂ.9:**ನಗರದ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಜಿಲ್ಲಾ ರಂಗಮಂದಿರದಲ್ಲಿ ವಿಶ್ವ ಕನ್ನಡಿಗರ ಸಂಸ್ಥೆ ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರದಲ್ಲಿ 2025-26 ನೇ ಸಾಲಿನ ಸಂಘ ಸಂಸ್ಥೆಗಳ ಧನಸಹಾಯ ಯೋಜನೆ ಅಡಿಯಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆ ದಿನದಂದು ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಸಾಹಿತ್ಯಗೋಷ್ಠಿ ಸಾಂಸ್ಕೃತಿಕ ಕಲಾಸಿರಿ, ಸಂಗೀತ ಕನ್ನಡ ಹಾಡುಗಳ ಗಾಯನ ಜಾನಪದ ಜಾದು ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿ ಜೀವನ ವ್ಯರ್ಥ್ಯಮಾಡಿಕೊಳ್ಳದೆ ಸತತ ಅಧ್ಯಯನ ಶಿಕ್ಷಕರು ಹೇಳಿಕೊಟ್ಟ ಪಾಠಗಳು ಪ್ರತಿದಿನ ಚಾಚುತಪ್ಪದೆ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬೆದುಕೊಂಡು ವಿಷಯವಾರು ಶಿಕ್ಷಕರ ಮುಂದೆ ಇಟ್ಟಾಗ ಶಿಕ್ಷಕರು ಕೊಟ್ಟಿರುವ ಸಲಹೆಗಳನ್ನು ಪಾಲಿಸಿದಾಗ, ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಸಂಸ್ಥೆವತಿಯಿಂದ ನನ್ನನ್ನೂ ಒಳಗೊಂಡಂತೆ 150 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಗುರುತಿಸಿ ಗೌರವಿಸಿದು ವಿದ್ಯಾರ್ಥಿ ಜೀವನ ಸಾಧನೆಗೆ ತಂದುಕೊಟ್ಟ ಪುರಸ್ಕಾರವಾಗಿದೆಯೆಂದು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 624 ಅಂಕಪಡೆದು ರಾಜ್ಯಕ್ಕೆ 2 ಯಾರ್ಂಕ ಪಡೆದ ವಿದ್ಯಾರ್ಥಿ ಆನಂದ ತನ್ನ ಅಭಿಪ್ರಾಯವನ್ನುವ್ಯಕ್ತಪಡಿಸಿದರು.

ಸ್ವಾಗತ ಪ್ರಾಸ್ತಾವಿಕ ನುಡಿ ಸಂಸ್ಥೆ ಅಧ್ಯಕ್ಷ ಸುಬ್ಬಣ್ಣ ಕರಕನಳ್ಳಿ ಮಾತನಾಡಿ ಈ ವರ್ಷ ಸರ್ಕಾರ ನಮ್ಮ ಸಂಸ್ಥೆಗೆ ಅಲ್ಪ ಹಣವನ್ನು ಮಂಜೂರು ಮಾಡಿದೆ, ಆದರೂ ರಾಜ್ಯ ಮಟ್ಟದ ಕಾರ್ಯಕ್ರಮ ಮಾಡಿದ್ದೇನೆ. ನಮ್ಮ ಸಾಹಿತ್ಯ ಸಂಸ್ಕೃತಿ ಭಾಷೆ ಉಳಿಸುವ ಜನರಲ್ಲಿ ತಲುಪಿಸುವ ಕೆಲಸ ಕಳೆದ 8 ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದೇನೆ. ರಾಷ್ಟ್ರೀಯ ಶಿಕ್ಷಣ ನೀತಿ ಪರಿಷ್ಕೃತ ಸರೋಜನಿ ಮಹಿಸಿ ವರದಿ ಕುರಿತು ಪ್ರೊ. ಶಿವಶರಣಪ್ಪ ಹುಗ್ಗಿ ಪಾಟೀಲ್ ಉಪನ್ಯಾಸ ಮಂಡಿಸಿ ಕಲಿಕೆಗೆ ವಿದ್ಯಾರ್ಥಿಗಳ ವಿಷಯ ಆಯ್ಕೆ ಹಕ್ಕು ತಂದುಕೊಟ್ಟವರು ಬಾಬಾಸಾಹೇಬ್ ಅಂಬೇಡ್ಕರ ಕೇಂದ್ರ ಸರ್ಕಾರದ ಆಧಿನದಲ್ಲಿರುವ, ರೈಲ್ವೆ ಅಂಚೆ ಜೀವವಿಮು, ಕಂಪನಿಗಳಲ್ಲಿ ಸ್ಥಳಯರಿಗೆ ಉದ್ಯೋಗ ನೀಡಬೇಕು ಇದು ಕ್ರಮಬದ್ಧವಾಗಿ ಸರ್ಕಾರ ಜಾರಿಗೋಳಿಸಬೇಕು ಅದು ಇಚ್ಛೇಶಕ್ತಿಯಿಂದ ಮಾತ್ರ ಸಾದ್ಯ. ಕನ್ನಡ ಭಾಷೆ ನಿನ್ನೆ ಇಂದು ನಾಳೆ ಡಿಜಿಟಲಕರಣದಲ್ಲಿ ಕನ್ನಡ ಭಾಷೆ ಬೆಳವಣಿಗೆ ಕುರಿತು ಡಾ. ರಾಮಚಂದ್ರ ಗಣಾಪೂರು ಉಪನ್ಯಾಸ ಮಂಡಿಸಿ ತಾಯಿಭಾಷೆ ಯಾವುದೇ ಕಾರಣಕ್ಕೂ ಮರೆಯಭಾರದು ಯೋಗ ಶಿಕ್ಷಣದ ಬಗ್ಗೆ ಸಂದೀಪ ಸಾಧುರೆ,ಉಪನ್ಯಾಸ ನೀಡಿ ಆರೋಗ್ಯವಂತ ಜೀವನ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಯೋಗಶಿಕ್ಷಣ ಅವಶ್ಯಕವಾಗಿದೆ. ಜಾನಪದ ಜಾದು ತುಕರಾಮ ಭೋಲಾ ಪ್ರಕಾಶ ಕುಲಕರ್ಣಿ ನಡೆಸಿಕೊಟ್ಟರು, ನಾಲ್ಕನೆ ತರಗತಿ ವಿದ್ಯಾರ್ಥಿ ಅಂಬಾದಾಸ ಸಂವಿಧಾನ ಪೀಠಿಕೆ ವಾಚನೆ ಮಾಡಿದರು. ಕು. ನೇತ್ರ, ವಿಶಾಲ ಡಾನ್ಸ ಆಕಾಡೆಮಿ ಮಕ್ಕಳು ಸಾಂಸ್ಕೃತಿಕ ಕಲಾಸಿರಿ ಪ್ರದರ್ಶನ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀ ಬಳವಂತರಾವ ಪಾಟೀಲ್ ಬಸವಣ್ಣ ಕರ್ಮಭೂಮಿ ಕನ್ನಡ ಸಾಹಿತ್ಯ ಸಂಸ್ಕೃತಿ ಶ್ರೀಮಂತಿಕೆ ಸ್ಥಾನದಲ್ಲಿಟ್ಟಿದೆ. ವೇದಿಕೆ ಮೇಲೆ ನಿವೃತ್ತವಾರ್ತ ಅಧಿಕಾರಿ ಜಿ ಚಂದ್ರಕಾಂತ ಅಂತರಾಷ್ಟ್ರೀಯ ಕನ್ನಡ ಪ್ರಚಾರಕ್ಕೆ ಡಾ. ದೊಡ್ಡಪ್ಪಾ ಪೂಜಾರಿ ಅಧ್ಯಕ್ಷತೆ ವಹಿಸಿದರು. ಪ್ರಭು ಕಾಂಬಳೆ ರಾಜಕುಮಾರ ಹಿರೇಮಠ, ಆಕಾಶ ಜ್ಯೋತಿ, ರಮೇಶ ಬಾಬು ಜೈಧ್ವನಿ ಡಾ. ಅಜ್ಜಯ್ಯ ವಿಜಯನಗರ ಕನ್ನಡ ಹಾಡುಗಳು ಹಾಡಿದರು, ಶಿವರಾಜ ಮಿತ್ರ ಭರತ ಮೇತ್ರೆ ಪ್ರಿಯಾಂಕ ಅಶ್ವಜೀತ ದಂಡಿನ, ಅವಿನಾಶ ಸೋನಿ ರಾಜು ಪವಾರ, ಕವಿತೆಗಳು ವಾಚನ ಮಾಡಿದರು, ರಕ್ಷಾಳ ಭಜನೆ ತಂಡ, ರಮಾಬಾಯಿ ಸಾಂಸ್ಕೃತಿಕ ಮಹಿಳಾ ಸಂಘ ಜೈಭೀಮ ನಗರ ಭಜನೆ ತಂಡ ಕುಂಬರವಾಡ ಮಹಿಳಾ ಭಜನೆ ತಂಡ ಭಜನೆಪದಗಳು ಹಾಡಿದರು. ಕಾರ್ಯಕ್ರದ ನಿರೂಪಣೆ ದಿಲೀಪಕುಮಾರ ಮೋಘಾ,ನಡೆಸಿಕೊಟ್ಟರು. ವೇದಿಕೆ ಮೇಲೆ ಪರಿಸರವಾದಿ ಡಾ. ಕಾಶಿನಾಥ ಪಾಟೀಲ್, ಜಾನಪದ ಆಕಾಡಮಿ ಸದಸ್ಯ ವಿಜಯಕುಮಾರ ಸೋನಾರೆ, ಜಾನಪದ ಗಾಯಕ ಶಂಭುಲಿಂಗ ವಾಲದೊಡ್ಡಿ, ಶ್ರೀಕಾಂತ ಭವಾನಿ, ಅವಿನಾಶ ಬುದೇರಾಕರ್ ಅಂಬಾದಸ ಸೈನೆ, ಬಾಬುರಾವ ಕೆ ಬಿಟ್ಟಿ, ಗೌಸುದ್ದೀನ ಚಂದ್ರಕಾಂತ ದೇವಕೆ ರಾಕೇಶ ಬಂಗ್ಲೆ ಸಂಸ್ಥೆ ಉಪಾಧ್ಯಕ್ಷ ಪ್ರಕಾಶ, ಕಾರ್ಯದರ್ಶಿ ಪ್ರಿಯಾಂಕ, ತೇಜಮ್ಮಾ ಶಾರದಾ, ರವಿಕುಮಾರ ಸಂಗೀತಾ, ಕಸ್ತೂರಾಬಾಯಿ ಉಜ್ವಲಾ. ಉಪಸ್ಥಿತರಿದ್ದರು.

# ಮತ್ತೊಮ್ಮೆ ಎಲ್‌ಪಿಜಿ ಬೆಲೆ ಏರಿಕೆ: ಉಜ್ವಲ ಸಿಲೆಂಡರ್ 4ಕ್ಕೆ ಇಳಿಸಿ ಅಡುಗೆ ಮನೆಗೆ ಕೊಳ್ಳಿ ಇಟ್ಟ ಪ್ರಧಾನಿ ಮೋದಿ ಡಾ. ಆನಂದ ಕುಮಾರ್



**ಬೆಂಗಳೂರು,ಜೂ.9:** ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ತತ್ತರಿಸಿರುವಾಗ ಮತ್ತೊಮ್ಮೆ ಅಡುಗೆ ಅನಿಲದ ದರ ಏರಿಕೆ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅಡುಗೆ ಮನೆಗೆ ಕೊಳ್ಳಿ ಇಟ್ಟಿದ್ದಾರೆ. ಉಜ್ವಲ ಯೋಜನೆಯಡಿ ಸಿಲೆಂಡರ್ ಗಳನ್ನು 4ಕ್ಕೆ ಇಳಿಸಿರುವುದು ಖಂಡನೀಯ. ಇದೇನಾ "ಸಬ್ ಕಾ ಸಾಥ್ ಸಬ್ ಕಾ ವಿಕಾಸ್" ಎಂದು ಎಐಸಿಸಿ ಎಸ್.ಸಿ ವಿಭಾಗದ ರಾಷ್ಟ್ರೀಯ ಸಂಯೋಜಕರು ಹಾಗೂ ಮಹಾರಾಷ್ಟ್ರ ಉಸ್ತುವಾರಿ ಡಾ. ಆನಂದ ಕುಮಾರ್ ಟೀಕಿಸಿದ್ದಾರೆ.ಉಜ್ವಲ ಯೋಜನೆಯಡಿ 14.2 ಕೆ.ಜಿ 12 ಸಿಲೆಂಡರ್ ಗಳನ್ನು ನೀಡಲಾಗುತ್ತಿತ್ತು. ಕಳೆದ ವರ್ಷ ಇದನ್ನು 9ಕ್ಕೆ ಇಳಿಸಿ, ಇದೀಗ 4ಕ್ಕೆ ತಗ್ಗಿಸಿರುವುದು ಖಂಡನೀಯ. ಮೋದಿ ಸರ್ಕಾರ ಮತ್ತೊಂದು ದುಬಾರಿ ಬದುಕಿನ ಕೊಡುಗೆ ನೀಡಿದ್ದು, ಮೂರು ತಿಂಗಳಲ್ಲಿ ಅಡುಗೆ ಬೆಲೆ ದರವನ್ನು 90 ರೂಪಾಯಿ ಹೆಚ್ಚಿಸಿದೆ. ಡಾ. ಮನಮೋಹನ್ ಸಿಂಗ್ ಅವಧಿಯಲ್ಲಿ 400 ರೂ ಇದ್ದ ಸಿಲೆಂಡರ್ ಬೆಲೆ ಇದೀಗ ಒಂದು ಸಾವಿರ ರೂ ಸನಿಹಕ್ಕೆ ಬಂದಿದೆ. ಈಸ್ಟ್ ಇಂಡಿಯಾ ಕಂಪೆನಿಯ ಮಾದರಿಯಂತೆ ದೇಶದ ಜನರ ಹಣವನ್ನು ಸರ್ಕಾರ ಕೊಳ್ಳೆ ಹೊಡೆಯುತ್ತಿದೆ. ಮುಂದೆ ಅಡುಗೆ ಮಾಡುವನ್ನು ಬಿಟ್ಟು ಸೊಪ್ಪು, ಸದೆ ತಿಂದು ಬದುಕುವಂತೆ ಮೋದಿ ಕರೆ ಕೊಟ್ಟರೂ ಅಚ್ಚರಿಯಿಲ್ಲ ಎಂದಿದ್ದಾರೆ.

"ಅಚ್ಚೇ ದಿನ್" ಹಾಗೂ "ಬಡವರ ಪರ ಸರ್ಕಾರ" ಎಂಬ ಘೋಷಣೆಗಳ ಮೂಲಕ ಅಧಿಕಾರಕ್ಕೆ ಬಂತು. ಕಳೆದ ಹಲವು ವರ್ಷಗಳ ಬೆಳವಣಿಗೆಗಳನ್ನು ಗಮನಿಸಿದರೆ ಸಾಮಾನ್ಯ ಕುಟುಂಬಗಳ ಜೀವನ ನಿರ್ವಹಣೆಯ ವೆಚ್ಚ ಮಾತ್ರ ನಿರಂತರವಾಗಿ ಹೆಚ್ಚುತ್ತಲೇ ಬಂದಿದೆ. ಕಾಂಗ್ರೆಸ್ ಆಡಳಿತದಲ್ಲಿ ಅಡುಗೆ ಅನಿಲ ಸಬ್ಸಿಡಿ ಯೋಜನೆಗಳ ಮೂಲಕ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ನೆರವಾಗುತ್ತಿತ್ತು. ಇಂದು ಅದೇ ವರ್ಗಗಳ ಮೇಲೆ ಬೆಲೆ ಏರಿಕೆಯ ಭಾರವನ್ನು ಹೇರುತ್ತಿದೆ ಎಂದು ಟೀಕಿಸಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಸಿಲಿಂಡರ್ ದರಗಳು ನಿರಂತರವಾಗಿ ಏರಿದರೆ, ಅನೇಕ ಬಡ ಕುಟುಂಬಗಳು ಮತ್ತೆ ಕಟ್ಟಿಗೆ, ಸೌದೆ ಹಾಗೂ ಸಾಂಪ್ರದಾಯಿಕ ಇಂಧನಗಳತ್ತ ಮರಳುವ ಅಪಾಯವಿದೆ. ಸಂಪರ್ಕ ಪಡೆದ ನಂತರವೂ ಮರುಪೂರೈಕೆ ಸಿಲಿಂಡರ್ ಖರೀದಿಸಲು ಸಾಧ್ಯವಾಗದ ಕಾರಣ ಹಲವು ಉಜ್ವಲ ಫಲಾನುಭವಿಗಳು ಗ್ಯಾಸ್ ಬಳಕೆಯನ್ನು ಕಡಿಮೆ ಮಾಡಿರುವುದಾಗಿ ವಿವಿಧ ಅಧ್ಯಯನಗಳು ಮತ್ತು ವರದಿಗಳು ಸೂಚಿಸಿವೆ.

ಕಚ್ಚಾ ತೈಲದ ಬೆಲೆ ಇಳಿದಾಗ ಅದರ ಸಂಪೂರ್ಣ ಲಾಭವನ್ನು ಗ್ರಾಹಕರಿಗೆ ನೀಡದೆ, ಕೇಂದ್ರ ಸರ್ಕಾರ ವಿವಿಧ ತೆರಿಗೆಗಳ ಮೂಲಕ ಹೆಚ್ಚಿನ ಆದಾಯ ಸಂಗ್ರಹಿಸಿದೆ. ಜಾಗತಿಕವಾಗಿ ಬೆಲೆ ಏರಿದಾಗ ಅದರ ಹೊರೆ ನೇರವಾಗಿ ಜನರ ಮೇಲೆ ಬೀಳುತ್ತಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಇಂಧನ ಕ್ಷೇತ್ರದಲ್ಲಿ ಸರ್ಕಾರದ ನೀತಿಗಳು ಜನಪರವಾಗಿರುವುದಕ್ಕಿಂತ ಬಡವರ ಜೇಬಿನಿಂದ ಹಣ ಕಿತ್ತು ಉಳ್ಳವರಿಗೆ ವರ್ಗಾಯಿಸುವ ನೀತಿ ಅನುಸರಿಸುತ್ತಿದೆ ಎಂದು ಟೀಕಿಸಿದ್ದಾರೆ. ದೇಶದ ಮಧ್ಯಮ ವರ್ಗವು ತೆರಿಗೆ ಕಟ್ಟುವ ವರ್ಗವಾಗಿದ್ದರೂ, ಬೆಲೆ ಏರಿಕೆಯ ಸಂದರ್ಭದಲ್ಲಿ ಅವರಿಗೆ ಸಿಗುವ ನೆರವು ಅತ್ಯಂತ ಕಡಿಮೆ ಎಂಬ ಅಸಮಾಧಾನವಿದೆ. ಶಿಕ್ಷಣ, ಆರೋಗ್ಯ, ಮನೆ ಬಾಡಿಗೆ, ವಿದ್ಯುತ್, ಸಾರಿಗೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ವೆಚ್ಚ ಹೆಚ್ಚುತ್ತಿರುವ ಸಂದರ್ಭದಲ್ಲಿ ಅಡುಗೆ ಅನಿಲದ ದರ ಏರಿಕೆಯೂ ಕುಟುಂಬದ ಬಜೆಟ್‌ಗೆ ಮತ್ತೊಂದು ಹೊಡೆತವಾಗಿದೆ. ತಿಂಗಳ ಆದಾಯ ಸ್ಥಿರವಾಗಿದ್ದರೂ ಖರ್ಚು ಮಾತ್ರ ನಿರಂತರವಾಗಿ ಏರುತ್ತಿರುವುದರಿಂದ ಮಧ್ಯಮ ವರ್ಗದ ಉಳಿತಾಯ ಸಾಮರ್ಥ್ಯ ಕುಸಿಯುತ್ತಿದೆ. ಇದು ದೇಶದ ಆರ್ಥಿಕತೆಯ ಮೇಲೆಯೂ ದೀರ್ಘಾವಧಿಯಲ್ಲಿ ಪರಿಣಾಮ ಬೀರುವ ಸಾಧ್ಯತೆ ಇದೆ.

ಚುನಾವಣೆಗಳ ಸಮಯದಲ್ಲಿ ಮಾತ್ರ ಸಬ್ಸಿಡಿ, ಬೆಲೆ ಇಳಿಕೆ ಅಥವಾ ಜನಪರ ಘೋಷಣೆಗಳು ಮೊಳಗುತ್ತವೆ. ಚುನಾವಣೆ ಬಳಿಕ ಮತ್ತೆ ಬೆಲೆ ಏರಿಕೆಗಳ ಸರಣಿ ಆರಂಭವಾಗುತ್ತದೆ. ಜನರ ಬದುಕಿನ ಮೇಲೆ ನೇರ ಪರಿಣಾಮ ಬೀರುವ ಇಂಧನ ಮತ್ತು ಅಡುಗೆ ಅನಿಲದಂತಹ ವಿಷಯಗಳಲ್ಲಿ ಸರ್ಕಾರ ದೀರ್ಘಾವಧಿಯ ಸ್ಥಿರ ನೀತಿ ರೂಪಿಸಬೇಕೇ ಹೊರತು, ರಾಜಕೀಯ ಲಾಭ–ನಷ್ಟದ ಲೆಕ್ಕಾಚಾರದಲ್ಲಿ ನಿರ್ಧಾರಗಳನ್ನು ಕೈಗೊಳ್ಳಬಾರದು. ಅಡುಗೆ ಅನಿಲವು ಇಂದು ಐಷಾರಾಮಿ ವಸ್ತುವಲ್ಲ; ಪ್ರತಿಯೊಂದು ಮನೆಯ ಮೂಲಭೂತ ಅಗತ್ಯವಾಗಿದೆ. ಇಂತಹ ಅಗತ್ಯ ಸೇವೆಯ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿರುವುದು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಜೀವನವನ್ನು ಇನ್ನಷ್ಟು ಕಷ್ಟಕರಗೊಳಿಸುತ್ತಿದೆ.

ಬೆಲೆ ಏರಿಕೆಯ ಭಾರದಿಂದ ನರಳುತ್ತಿರುವ ಜನರು ಅಭಿವೃದ್ಧಿಯ ಫಲವನ್ನು ಅನುಭವಿಸುತ್ತಿದ್ದಾರೆಯೇ ಎಂಬ ಪ್ರಶ್ನೆ ಉದ್ಭವಿಸಿದೆ.ಜನರ ಜೀವನಮಟ್ಟ ಸುಧಾರಿಸುವುದೇ ಸರ್ಕಾರದ ನಿಜವಾದ ಸಾಧನೆಯಾಗಬೇಕು. ಆದರೆ ಅಡುಗೆ ಮನೆಯ ಅಗ್ನಿಯನ್ನು ಉಳಿಸಿಕೊಳ್ಳುವುದೇ ಸವಾಲಾಗುತ್ತಿರುವ ಸಂದರ್ಭದಲ್ಲಿ ಎಲ್‌ಪಿಜಿ ದರ ಏರಿಕೆಗಳು ಮೋದಿ ಸರ್ಕಾರದ ಆರ್ಥಿಕ ನೀತಿಗಳ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ಜನರ ಬದುಕಿನ ವಾಸ್ತವ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ತಕ್ಷಣವೇ ಬೆಲೆ ನಿಯಂತ್ರಣ ಹಾಗೂ ಪರಿಣಾಮಕಾರಿ ಸಬ್ಸಿಡಿ ವ್ಯವಸ್ಥೆ ಜಾರಿಗೆ ತರಬೇಕೆಂಬ ಒತ್ತಾಯ ಮತ್ತಷ್ಟು ಬಲವಾಗುತ್ತಿದೆ ಎಂದಿದ್ದಾರೆ.
ಮೋದಿ ಸರ್ಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ. ಭಾರತದ ಮಾವಿಗೆ ಜಪಾನ್ ನಿಷೇಧ ಹೇರಿತು, ಅಕ್ಕಿಯನ್ನು ಚೀನಾ ನಿಷೇಧಿಸಿತು. ವೀಸಾ ಇಲ್ಲದವರಿಗೆ ತೈವಾನ್ ದೇಶದ ಪ್ರಯಾಣ ಬಂದ್ ಆಯಿತು. ಕೋರಿಯಾ ದೇಶಗಳು ಷೇರು ಮಾರುಕಟ್ಟೆಯಲ್ಲಿ ವಿಜೃಂಭಿಸುತ್ತಿವೆ. ರೂಪಾಯಿ ಮೌಲ್ಯ ಕುಸಿಯುತ್ತಿದ್ದರೂ ವಿಶ್ವಗುರು ಮೋದಿ ಚಕಾರ ಎತ್ತುತ್ತಿಲ್ಲ ಎಂದು ಡಾ. ಆನಂದ ಕುಮಾರ್ ವಾಗ್ದಾಳಿ ನಡೆಸಿದ್ದಾರೆ.



**ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಗರದ ಜೆಸಿ ನಗರದಲ್ಲಿರುವ ಟೌನ್ ಹಾಲ್‌ನ್ನು ರಂಗಭೂಮಿ ಚಟುವಟಿಕೆಗಳಿಗಾಗಿ ಸಿದ್ದಪಡಿಸಿ ಕೊಡುವುದರ ಕುರಿತು ಸ್ವರ್ಣ ರಂಗಭೂಮಿ ಸಂಘದ ವತಿಯಿಂದ ನಗರದ ಪಾಲಿಕೆ ಆವರಣದಲ್ಲಿ ಪ್ರತಿಭಟಿಸಿ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.**

# ಆರಂಭಿಕ ಪತ್ತೆ ಮತ್ತು ನಿಖರ ಚಿಕಿತ್ಸೆಯಿಂದ ಬ್ರೇನ್ ಟ್ಯುಮರ್ ನಿವಾರಣೆ ಸಾಧ್ಯ: ಡಾ.ಭರತಕುಮಾರ




**ಬೀದರ್:ಜೂ.9:** ಆರಂಭಿಕ ರೋಗದ ಪತ್ತೆ ಹಾಗೂ ಅದಕ್ಕೆ ತುರ್ತು ಚಿಕಿತ್ಸೆ ನೀಡುವುದರಿಂದ ಮೆದುಳಿನ ಗಡ್ಡೆ (ಃಡಿಚಿಟಿ ಖಿಣಟಿಂಡಿ) ನೀವಾರಣೆ ಮಾಡುವ ಮುಖೇನ ರೋಗಿಯ ಜೀವ ಉಳಿಸಬಹುದಾಗಿದೆ ಎಂದು ಹೈದ್ರಾಬಾದ್ ಹೈಟೆಕ್ ಸೀಟಿ ಏರಿಯಾದ ಯಶೋದಾ ಆಸ್ಪತ್ರೆಯ ಕ್ಯಾನ್ಸರ್ ರೋಗ ತಜ್ಞರಾದ ಡಾ.ಭರತಕುಮಾರ ತಿಳಿಸಿದರು.
ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಸೋಮವಾರ ಇಡೀ ವಿಶ್ವಾದ್ಯಂತ ಆಚರಿಸಲಾದ ವಿಶ್ವ ಮೆದುಳು ಗಡ್ಡೆ ದಿನಾಚರಣೆ ಪ್ರಯುಕ್ತ ಮೆದುಳಿನ ಗಡ್ಡೆಯ ಲಕ್ಷಣಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯವನ್ನು ಒತ್ತಿ ಹೇಳಿದರು.
ಮೆದುಳಿನ ಗಡ್ಡೆಗಳು ಯಾವುದೇ ವಯಸ್ಸಿನವರಲ್ಲಿ ಕಾಣಿಸಬಹುದಾಗಿದ್ದು, ಆರಂಭಿಕ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದರಿಂದ ಚಿಕಿತ್ಸೆಯ ಯಶಸ್ಸು ಹಾಗೂ ಜೀವನದ ಗುಣಮಟ್ಟವನ್ನು ಗಮನಾರ್ಹವಾಗಿ ಹೆಚ್ಚಿಸಬಹುದು ಎಂದು ತಿಳಿಸಿದರು.
ನಿರಂತರ ತಲೆನೋವು, ಆಕಸ್ಮಿಕ ಆಘಾತಗಳು (ಸೀಜರ್ಸ್), ಕಾರಣವಿಲ್ಲದ ದೌರ್ಬಲ್ಯ, ದೃಷ್ಟಿ ಸಮಸ್ಯೆಗಳು, ಸಮತೋಲನ ಕಳೆದುಕೊಳ್ಳುವುದು, ನೆನಪಿನ ಶಕ್ತಿ ಕುಂಠಿತಗೊಳ್ಳುವುದು ಹಾಗೂ ವ್ಯಕ್ತಿತ್ವದಲ್ಲಿ ಬದಲಾವಣೆಗಳು ಮೆದುಳಿನ ಗಡ್ಡೆಯ ಪ್ರಮುಖ ಲಕ್ಷಣಗಳಾಗಿವೆ. ಇಂತಹ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವುದು ಅಗತ್ಯ ಎಂದು ಸಲಹೆ ನೀಡಿದರು.
ಕ್ಯಾನ್ಸರ್ ಕ್ಷೇತ್ರದಲ್ಲಿ ಆಗಿರುವ ತಾಂತ್ರಿಕ ಪ್ರಗತಿಯಿಂದ ಮೆದುಳಿನ ಗಡ್ಡೆಗಳ ಚಿಕಿತ್ಸೆಯಲ್ಲಿ ಮಹತ್ತರ ಬದಲಾವಣೆ ಕಂಡು ಬಂದಿದೆ. ಪ್ರಸ್ತುತ ಶಸ್ತ್ರ ಚಿಕಿತ್ಸೆ, ನಿಖರ ಕಿರಣ ಚಿಕಿತ್ಸೆ (ರೇಡಿಯೇಶನ್ ಥೆರಪಿ), ಕೀಮೋಥೆರಪಿ, ಟಾರ್ಗೆಟೆಡ್ ಥೆರಪಿಗಳು ಹಾಗೂ ಇಮ್ಯುನೋ ಥೆರಪಿ ಸೇರಿದಂತೆ ರೋಗಿಯ ಅಗತ್ಯಕ್ಕೆ ಅನುಗುಣವಾದ ಚಿಕಿತ್ಸಾ ವಿಧಾನಗಳನ್ನು ಬಳಸಲಾಗುತ್ತಿದೆ ಎಂದರು.
ಇತ್ತೀಚಿನ ತಂತ್ರಜ್ಞಾನವಾದ ಎಂಆರ್-ಲೈನಾಕ್ (ಒಖ-ಐಟಿಚಿಛಿ) ಕುರಿತು ಮಾತನಾಡಿದ ತಜ್ಞರು, ಇದು ಉನ್ನತ ಮಟ್ಟದ ಎಂಆರ್‌ಐ ಚಿತ್ರಣವನ್ನು ಕಿರಣ ಚಿಕಿತ್ಸೆಯೊಂದಿಗೆ ಸಂಯೋಜಿಸುವ ಮೂಲಕ ಗಡ್ಡೆಯನ್ನು ನೈಜ ಸಮಯದಲ್ಲಿ ವೀಕ್ಷಿಸಿ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ. ಇದರಿಂದ ಆರೋಗ್ಯಕರ ಮೆದುಳಿನ ಭಾಗಗಳಿಗೆ ಹಾನಿಯಾಗದಂತೆ ಅತ್ಯಂತ ನಿಖರವಾಗಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.
ಅನೇಕ ರೋಗಿಗಳು ಆರಂಭಿಕ ನರ ವೈಜ್ಞಾನಿಕ ಲಕ್ಷಣಗಳನ್ನು ಕಡೆಗಣಿಸುವುದರಿಂದ ರೋಗ ಪತ್ತೆಯಲ್ಲಿ ವಿಳಂಬವಾಗುತ್ತದೆ. ಸಾರ್ವಜನಿಕ ಜಾಗೃತಿ ಹೆಚ್ಚಿದರೆ ಆರಂಭಿಕ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಪರಿಣಾಮಕಾರಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ಆಧುನಿಕ ನಿಖರ ಚಿಕಿತ್ಸಾ ವಿಧಾನಗಳಿಂದ ರೋಗಿಗಳಿಗೆ ಹೆಚ್ಚು ಸುರಕ್ಷಿತ ಮತ್ತು ಪರಿಣಾಮಕಾರಿ ಆಯ್ಕೆಗಳು ಲಭ್ಯವಿದೆ ಎಂದು ಹೇಳಿದರು.
ಮೆದುಳಿನ ಗಡ್ಡೆ ಅಂಗವಾಗಿ ಸಾರ್ವಜನಿಕರು ಎಚ್ಚರಿಕೆ ಸೂಚನೆಗಳ ಬಗ್ಗೆ ಜಾಗರೂಕರಾಗಿರಬೇಕು, ಲಕ್ಷಣಗಳು ಕಂಡು ಬಂದ ತಕ್ಷಣ ವೈದ್ಯಕೀಯ ಸಲಹೆ ಪಡೆಯಬೇಕು ಹಾಗೂ ಚಿಕಿತ್ಸಾ ಕ್ಷೇತ್ರದಲ್ಲಿ ಆಗಿರುವ ಹೊಸ ಪ್ರಗತಿಗಳ ಬಗ್ಗೆ ವಿಶ್ವಾಸವಿಡಬೇಕು ಎಂದು ವಿವರಿಸಿದರು.
ಸುಮಾರು 30 ವರ್ಷಗಳಿಂದ ಆರೋಗ್ಯ ಸೇವೆಗಳನ್ನು ಒದಗಿಸುತ್ತಿರುವ ಯಶೋದ ಆಸ್ಪತ್ರೆಗಳ ಗುಂಪು, ಹೈದರಾಬಾದ್‌ನ ಸೋಮಾಜಿಗುಡ, ಸಿಕಂದರಾಬಾದ್, ಮಲಪೇಟ್ ಹಾಗೂ ಹೈಟೆಕ್ ಸಿಟಿಗಳಲ್ಲಿ ನಾಲ್ಕು ಆಸ್ಪತ್ರೆಗಳೊಂದಿಗೆ ಸುಮಾರು 4,000 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ಆಧುನಿಕ ತಂತ್ರಜ್ಞಾನ ಮತ್ತು ರೋಗಿ-ಕೇಂದ್ರೀಕೃತ ಸೇವೆಗಳ ಮೂಲಕ ವಿಶ್ವ ಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಇಲ್ಲಿಯ ಸಾರ್ವಜನಿಕರು ಆಸ್ಪತ್ರೆಯ ಸೌಲತ್ತು, ವಿಶೇಷವಾಗಿ ಬ್ರೇನ್ ಟ್ಯುಮರ್ ಬಗೆಗಿನ ಚಿಕಿತ್ಸೆ ಪಡೆಯಲು ಮುಂದೆ ಬರುವಂತೆ ಡಾ.ಭರತಕುಮಾರ ಮನವಿ ಮಾಡಿದರು.
ಆಸ್ಪತ್ರೆಯ ವ್ಯವಸ್ಥಾಪಕ ಲಲಿತ ಶರ್ಮಾ ಹಾಗೂ ಆರೋಗ್ಯ ಮಿತ್ರ ರಾಜಕುಮಾರ ಇಟಕಾರಿ ಪತ್ರಿಕಾಗೋಷ್ಠಿಯಲ್ಲಿದ್ದರು.

# ವಾಡಿ: ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ



**ವಾಡಿ: ಜೂ.9:**ಪಟ್ಟಣದ ಪುರಸಭೆ ವ್ಯಾಪ್ತಿಯ ಹಲವು ಬಡಾವಣೆಗಳು ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದೆ ನರಳುತ್ತಿದ್ದು, ಕೂಡಲೇ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿ ಜನಧ್ವನಿ ಜಾಗೃತ ಸಮಿತಿಯ ಸದಸ್ಯರು ಪುರಸಭೆ ಮುಖ್ಯಾಧಿಕಾರಿಗಳಿಗೆ ಶನಿವಾರ ಮನವಿಪತ್ರ ಸಲ್ಲಿಸಿದರು.

ಸಮಿತಿಯ ಪದಾಧಿಕಾರಿಗಳು ಪುರಸಭೆ ಮುಖ್ಯಾಧಿಕಾರಿ ಮನೋಜಕುಮಾರ ಗುರಿಕಾರ ಅವರನ್ನು ಭೇಟಿಯಾಗಿ ಪಟ್ಟಣದ ವಿವಿಧ ಬಡಾವಣೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟರು.
ಮಲತಾಯಿ ಧೋರಣೆ: ಸಮಿತಿ ಅಧ್ಯಕ್ಷರ ಆಕ್ರೋಶ
ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ವೀರಭದ್ರಪ್ಪ ಆರ್.ಕೆ ಅವರು, "ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಪಾವತಿಸಿದ ತೆರಿಗೆ ಹಣದಿಂದಲೇ ಜನರಿಗಾಗಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಆದರೂ ವಾಡಿ ಪಟ್ಟಣದ ವಿವಿಧ ಬಡಾವಣೆಗಳ ಜನರು ಕನಿಷ್ಠ ಸೌಲಭ್ಯಗಳಿಂದಲೂ ವಂಚಿತಗೊಂಡಿರುವುದು ಖೇದಕರ," ಎಂದರು.
"ಈಗಾಗಲೇ ಮಳೆಗಾಲ ಪ್ರಾರಂಭವಾಗಿದ್ದು, ಪಟ್ಟಣದ ಕೆಲವು ಬಡಾವಣೆಗಳಲ್ಲಿನ ಚರಂಡಿಗಳು ಹೂಳು ತುಂಬಿ ಗಬ್ಬು ನಾರುತ್ತಿವೆ. ನೈರ್ಮಲ್ಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಜನರು ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿ ಬದುಕುತ್ತಿದ್ದಾರೆ. ಅದರಲ್ಲೂ ಬಸವನಗರ ಬಡಾವಣೆಯಂತೂ ಶೂನ್ಯ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಬೀದಿ ದೀಪಗಳನ್ನು ಒದಗಿಸದೆ ಪುರಸಭೆಯು ಬಡಾವಣೆಗಳ ವಿರುದ್ಧ ಮಲತಾಯಿ ಧೋರಣೆ ಅನುಸರಿಸುತ್ತಿದೆ. ತಕ್ಷಣವೇ ಜನರ ಬೇಡಿಕೆಗಳಿಗೆ ಸ್ಪಂದಿಸಬೇಕು," ಎಂದು ಅವರು ಒತ್ತಾಯಿಸಿದರು.
ಸಮಿತಿಯ ಪ್ರಮುಖ ಬೇಡಿಕೆಗಳು:
ಚರಂಡಿ ಹೂಳೆತ್ತುವುದು: ವಾಡಿ ಪಟ್ಟಣದ ಪ್ರತಿ ಬಡಾವಣೆಯ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತಕ್ಷಣವೇ ತೆರವುಗೊಳಿಸಬೇಕು.
ರೋಗ ನಿಯಂತ್ರಣ: ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಯಲು ಪಟ್ಟಣದಾದ್ಯಂತ ಫಾಗಿಂಗ್ ಮಾಡಿಸಬೇಕು ಮತ್ತು ಬ್ಲೀಚಿಂಗ್ ಪೌಡರ್ ಸಿಂಪಡಿಸಬೇಕು.
ಬೀದಿ ದೀಪಗಳ ಅಳವಡಿಕೆ: ಕತ್ತಲಲ್ಲಿ ಮುಳುಗಿರುವ ವಿವಿಧ ಬಡಾವಣೆಗಳಲ್ಲಿ ತಕ್ಷಣವೇ ಬೀದಿ ದೀಪಗಳನ್ನು ಅಳವಡಿಸಬೇಕು.
ಶುದ್ಧ ಕುಡಿಯುವ ನೀರು: ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಕಡ್ಡಾಯವಾಗಿ ಶುದ್ಧೀಕರಿಸಿ ಪೂರೈಸಬೇಕು.
ಈ ಸಂದರ್ಭದಲ್ಲಿ ಜನಧ್ವನಿ ಜಾಗೃತ ಸಮಿತಿಯ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪ ಆರ್.ಕೆ, ಉಪಾಧ್ಯಕ್ಷರಾದ ಶ್ರೀ ಸಿದ್ದಯ್ಯ ಶಾಸ್ತ್ರಿ ನಂದೂರಮಠ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಶೇಖ್ ಅಲ್ಲಾಭಕ್ಷ್, ಎಂ. ಡಿ ಯುಸೂಫ್ ಮುಲ್ಲಾ,ಆರ್ ಎನ್ ಆನಂದ, ವಿಠ್ಠಲ ರಾಠೋಡ, ಈರಣ್ಣ ಯಲಗಟ್ಟಿ, ಸುರೇಶ ಪಾಟೇಕರ, ಸೇರಿದಂತೆ ಸಮಿತಿಯ ಪ್ರಮುಖ ಸದಸ್ಯರು ಉಪಸ್ಥಿತರಿದ್ದರು.

# ದತ್ತಾತ್ರೇಯ ಪಾಟೀಲ ರೇವೂರ ಕುಂಟುಂಬದ ವಿರುದ್ಧ ಅವಹೇಳನ: ಖಂಡನೀಯ

**ಕಲಬುರಗಿ:** ಆಳಂದದ ಲಾಡ್ಲೆ ಮಶಾಕ್ ದರ್ಗಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ 'ದ್ವೇಷ ಭಾಷಣ' ಮಾಡಿರುವ ಆರೋಪದಡಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಕನ್ನಡಪರ ಹೋರಾಟಗಾರ ಮನೋಹರಕುಮಾರ ಬೀರನೂರ ಖಂಡಿಸಿದ್ದಾರೆ.
ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ದತ್ತಾತ್ರೇಯ ಪಾಟೀಲ ರೇವೂರ ಅವರು ನೀಡಿದ ಹೇಳಿಕೆಯನ್ನು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಆದರೆ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದವರ ವಿರುದ್ಧ ಸಮರ್ಪಕ ಕ್ರಮ ಕೈಗೊಂಡಿಲ್ಲ' ಎಂದು ಅವರು ದೂರಿದರು.
ಅಪ್ಪುಗೌಡರ ವಿರುದ್ದ ದಾಖಲಿಸಿರುವ ಸುಳ್ಳು ಪ್ರಕರಣವನ್ನು ಸರಕಾರ ಕೂಡಲೇ ಹಿಂಪಡೆಯಬೇಕು.ಮಾಜಿ ಶಾಸಕರಾದ ದತ್ತಾತ್ರೇಯ ಪಾಟೀಲ ರೇವೂರ ಅವರು ಹಳೆಯ ಘಟನೆಯ ಮೆಲುಕು ಹಾಕಿದ್ದಾರೆಯೇ ಹೊರತು ಯಾರನ್ನು ನಿಂದಿಸಿಲ್ಲ.ಆದರೆ ಅವರ ವಿರುದ್ದ ಸುಳ್ಳು ಕೇಸ ಹಾಕಿ,ಅವಾಚ್ಯ ಶಬ್ದಗಳಿಂದ ನಿಂದಿಸಿ ಪೊಲಿಸ ಠಾಣೆಗೆ ನುಗ್ಗಿದ 18 ಮಂದಿ ವಿರುದ್ದ ಪೊ?ಲಿಸರು ತಕ್ಷಣ ಕ್ರಮಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಗಡಿನಾಡಿನ ಕನ್ನಡಿಗರ ಮಹಾಸಂಗಮಕ್ಕೆ ಸಕಲ ಸಿದ್ಧತೆ



**ಆಳಂದ:ಜೂ.9:** ನಮ್ಮ ಕರ್ನಾಟಕ ಸೇನೆ ಆಶ್ರಯದಲ್ಲಿ ಪ್ರಥಮ ಗಡಿನಾಡು ಕನ್ನಡಿಗರ ಉತ್ಸವ ಜೂನ್.10ರಂದು ಭೂಸನೂರ ಸಕ್ಕರೆ ಕಾರ್ಖಾನೆ ಬಳಿಯ ನಿಲಾಂಬಿಕ ಕಲ್ಯಾಣ ಮಂಟಪದಲ್ಲಿ ಸಂಜೆ 6:00ಗಂಟೆಗೆ ಅದ್ದೂರಿಯಾಗಿ ಜರುಗಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಕನ್ನಡಾಭಿಮಾನಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ರಮೇಶ ಜಿ. ಜಗತಿ ಅವರು ಮನವಿ ಮಾಡಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿಯಲ್ಲಿ ಉತ್ಸವ ಕುರಿತು ಪ್ರಚಾರ ಪೋಸ್ಟರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಉತ್ಸವ ಸಮಾರಂಭವು ಆಗಮಿಸುವ ನಾಡಿನ ವಿವಿಧ ಮಠಾಧೀಶರ ಮೂಲಕ ಸಾಮೂಹಿಕವಾಗಿ ಜ್ಯೋತಿ ಬೆಳಗಿಸುವರು.

ಶಾಸಕ ಬಿ.ಆರ್. ಪಾಟೀಲ ಅವರು ನಾಡದೇವಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವರು. ಮಾಜಿ ಶಾಸಕ ಸುಭಾಷ ಗುತ್ತೇದಾರ ಸಮಾರಂಭವನ್ನು ಉದ್ಘಾಟನೆ ನೆರವೇರಿಸಲಿದ್ದಾರೆ. ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಎಂ. ಬಸವರಾಜ ಪಡಕೋಟಿ ಅಧ್ಯಕ್ಷತೆ ವಹಿಸುವರು.

ಕೃಷಿಕ ಸಮಾಜ ಅಧ್ಯಕ್ಷ ಗುರುಶರಣ ಪಾಟೀಲ ಕೊರಳ್ಳಿ ಮತ್ತು ಪಿಕೆಪಿಎಸ್ ಅಧ್ಯಕ್ಷ ಬಾಬುರಾವ್ ಪಾಟೀಲ, ಧರ್ಮರಾಜ ಸಾಹು, ಜಿಪಂ ಮಾಜಿ ಸದಸ್ಯ ಹರ್ಷಾನಂದ ಗುತ್ತೇದಾರ, ಉದ್ಯಮಿ ಸಂತೋಷ ಗುತ್ತೇದಾರ ಸೇರಿದಂತೆ ಅನೇಕರು ಸಸಿಗೆ ನೀರುಣಿಸುವರು. ಚಿತ್ರನಟ ಗಣೇಶರಾವ್ ಕೇಸರ್ಕರ, ಜಿಪಂ ಮಾಜಿ ಅಧ್ಯಕ್ಷ ನಿತೀನ ವಿ. ಗುತ್ತೇದಾರ, ಗ್ರಾಮೀಣ ಶಾಸಕ ಬಸವರಾಜ ಮುತ್ತಿಮುಡ್, ಬಿಜೆಪಿ ಮುಖಂಡ ಚಂದು ಪಾಟೀಲ ಉಪಸ್ಥಿತರಿರುವರು. ವೇದಿಕೆಯಲ್ಲಿ ಬುದ್ಧ, ಬಸವ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಜಿ ಶಾಸಕ ಅಪ್ಪುಗೌಡ ಪಾಟೀಲ,ಜಿಪಂ ಮಾಜಿ ಸದಸ್ಯ ವೀರಣ್ಣಾ ಮಂಗಾಣೆ ಮತ್ತು ಗ್ರಾಪಂ ಅಧ್ಯಕ್ಷ ಮುತ್ತಣ್ಣಾ ಬೀಳಗಿ ಪೂಜೆ ನೆರವೇರಿಸುವರು.

ಈ ಸಮಾರಂಭದಲ್ಲಿ ತಾಲೂಕು ಹಾಗೂ ಜಿಲ್ಲೆಯ ರಾಜಕೀಯ ಮುಖಂಡರು, ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಮತ್ತು ಕನ್ನಡಾಭಿಮಾನಿಗಳು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ನಂತರ ಸಾಂಸ್ಕೃತಿ ಹಾಗೂ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಈ ಸಂದರ್ಭದಲ್ಲಿ ಸೇನೆಯ ಸಾಮಾಜಿಕ ಜಾಲತಾಣದ ರಾಜ್ಯ ಉಪಾಧ್ಯಕ್ಷ ಶರಣು ವಿ. ಮುನ್ನೊಳ್ಳಿ, ಜಿಲ್ಲಾಧ್ಯಕ್ಷ ಪುನೀತರಾಜ ಕವಡೆ, ಸೇನೆಯ ವಾಹನ ಚಾಲಕರ, ಮಾಲೀಕರ ಘಟಕದ ಅಧ್ಯಕ್ಷ ಹರಿಷ್ ಜಗತಿ ಇತರರು ಉಪಸ್ಥಿತರಿದ್ದರು.

# ಕೆಪಿಎಸ್ ಸಿ ನೇಮಕಾತಿ ಹಗರಣ ಸಿಬಿಐ ತನಿಖೆಗೆ ಆಗ್ರಹ



**ಬಳ್ಳಾರಿ, ಜೂ.09:** ಕರ್ನಾಟಕ ಲೋಕಸೇವಾ ಆಯೋಗ 2023–2024ನೇ ಸಾಲಿನ ಗೆಜೆಟಡ್ ಪ್ರೋಬೇಷನರ್ ಗ್ರೂಪ್ –ಎ ಮತ್ತು ಬಿ ವೃಂದದ 384 ಹುದ್ದೆಗಳ ನೇಮಕದಲ್ಲಿ ಅಕ್ರಮ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ನಡೆದಿದೆಂದು ಸಾಮಾಜಿಕ ಹೋರಾಟಗಾರ ಸಿದ್ದೇಶ್ ಊಳೂರು ಆರೋಪಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತಿಚೆಗೆ ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಗೆಜೆಟೆಡ್ ಪ್ರೋಬೇಷನರಿ ಗ್ರೂಪ್–ಎ ಮತ್ತು ಗ್ರೂಪ್–ಬಿ, ವೃಂದದ 384 ಹುದ್ದೆಗಳ ನೇಮಕದಲ್ಲಿ ಮೇಲ್ನೋಟಕ್ಕೆ ಅಕ್ರಮ, ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತವು ನಡೆದಿರುವುದು ತಿಳಿದುಬಂದಿದೆ.

ಈ ನೇಮಕಾತಿಯ ಹಗಣಕ್ಕೆ ಸಂಬಂಧಿಸಿದಂತೆ ಗ್ರೇಡ್–ಎ ಹುದ್ದೆಗೆ 1.60 ಕೋಟಿ ಹಾಗೂ ಗ್ರೇಡ್–2 ಹುದ್ದೆಗೆ 1.10 ಲಕ್ಷಗಳು, ಮೊತ್ತವು ನಿಗದಿಯಾಗಿದೆಂದು ಆರೋಪಿಸಿದರು.

ಈ ನೇಮಕಾತಿಯ ಹಗರಣದಲ್ಲಿ ಆರ್ಹತೆಯಿಲ್ಲದ ಪ್ರಭಾವಿಗಳ ಮಕ್ಕಳು ಮತ್ತು ಅವರ ಸಂಬಂಧಿಕರು ಭಾಗಿಯಾಗಿರುವುದು ಕಂಡು ಬಂದಿದೆ. ಇದರಿಂದ ರಾಜ್ಯದ ಪ್ರತಿಭಾನಿತ್ವ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಲ್ಲದೇ ಅವರ ನೈತಿಕ ಸ್ಮರ್ಯ ಕುಂದಿಸಿದೆ. ಅವರ ಭವಿಷ್ಯವನ್ನು ಅಂತಕಕ್ಕೆ ದೂಡಿದಂತಾಗಿದೆ.

ಅಕ್ರಮವಾಗಿ ನೇಮಕಗೊಂಡ ಅಭ್ಯರ್ಥಿಗಳಿಂದ ಯಾವುದೇ ಪ್ರಾಮಾಣಿಕ ಪಾರದರ್ಶಕ ಭ್ರಷ್ಟಾಚಾರ ರಹಿತ ಆಡಳಿತವನ್ನು ನಿರೀಕ್ಷಿಸುವುದು ಅಸಾಧ್ಯವಾಗುತ್ತದೆ. ಈ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೆಪಿಎಸ್ ಸಿ ಅಧಿಕಾರಿಗಳಿಂದ ಆತಂರಿಕ ತನಿಕೆಗೆ ವಹಿಸಿರುವುದು ಈ ನೇಮಕಾತಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿರುದನ್ನು ಪುಷ್ಟಿಕರಿಸುತ್ತವೆ.

ಆದ್ದರಿಂದ ತನಿಖೆಯನ್ನು ಸಿಬಿಐ, ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಮತ್ತು ಈ ಹಗರಣದಲ್ಲಿ ಭಾಗಿಯಾದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ, ರಾಜ್ಯದ ಪ್ರತಿಭಾವಂತ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಟಿಯಲ್ಲಿ ಉಪ್ಪಾರ ಮಲ್ಲಪ್ಪ ಮೊದಲದವರು ಇದ್ದರು.

# ಬಂದಿಗಳ ಮನ ಪರಿವರ್ತನೆಗಾಗಿ ಸ್ಥಳೀಯ ಎನ್‌ಜಿಓ ಯಿಂದ ಎರಡು ಟಿ.ವ್ಹಿ.ಗಳ ಕಾಣಿಕೆ



**ಕಲಬುರಗಿ,ಜೂ.09:**ಕಡಗಂಚಿಯ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ರವರು ರವಿವಾರ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿನ ಬಂದಿಗಳ ಮನ ಪರಿವರ್ತನೆಗಾಗಿ ಎರಡು ಟಿವಿಗಳನ್ನು ಕಾಣಿಕೆಯಾಗಿ ನೀಡಿದ್ದಾರೆ.

ಕಡಗಂಚಿ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಸಂಸ್ಥೆಯ ಕಾರ್ಯದರ್ಶಿ ಫಾದರ್ ವಿಲಿಯಂ ಮಿರಂಡಾ ಅವರು ಮಾತನಾಡಿ, ಕಲಬುರಗಿ ಕೇಂದ್ರ ಕಾರಾಗೃಹದ ಬಂದಿಗಳು ಟಿವಿಗಳಲ್ಲಿ ಬರುವ ಉತ್ತಮವಾದ ಕಾರ್ಯಕ್ರಮಗಳನ್ನು ವೀಕ್ಷಿಸಿ ಇದರ ಲಾಭವನ್ನು ಪಡೆಯಬೇಕೆಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯ ಅಧೀಕ್ಷಕ ರಾಕೇಶ್ ಕಾಂಬಳೆ ಅವರು ಮಾತನಾಡಿ, ದೂರದರ್ಶನವು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. ಡಿಸ್ಕವರಿಯಂತಹ ಅನೇಕ ಶೈಕ್ಷಣಿಕ ಚಾನೆಲ್‌ಗಳು ವೈಜ್ಞಾನಿಕ ಜ್ಞಾನವನ್ನು ಹೆಚ್ಚಿಸಲು ಸಹಾಯ ಮಾಡಲಿವೆ. ಇದನ್ನು ಸಾಮೂಹಿಕ ಶಿಕ್ಷಣಕ್ಕೆ ಅದ್ಭುತ ಮಾಧ್ಯಮವಾಗಿ ಬಳಸಬಹುದಾಗಿದೆ. ಬಂದಿಗಳು ಉತ್ತಮ ನಡೆತೆಯನ್ನು ಹೊಂದಿ ಇಲ್ಲಿಂದ ಒಳ್ಳೆಯ ವ್ಯಕ್ತಿಯಾಗಿ ಸಮಾಜಕ್ಕೆ ಉತ್ತಮ ಸಮಾಜಮುಖಿ ಕಾಯಕದಲ್ಲಿ ತೊಡಗಿ ತಮ್ಮ ಕುಟುಂಬ ಮತ್ತು ಸಮಾಜಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಲಿ ಎಂಬ ಸದುದ್ದೇಶದಿಂದ ಕಡಗಂಚಿಯ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಷ್ಟರವರು 2 ಟಿವಿಗಳನ್ನು ಕಾಣಿಕೆಯಾಗಿ ನೀಡಿರುವುದಕ್ಕೆ ಇಲಾಖೆ ವತಿಯಿಂದ ಅವರಿಗೆ ತುಂಬು ಹೃದಯದ ಅಭಿನಂದನೆಗಳು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಹಾಯಕ ಅಧೀಕ್ಷಕರಾದ ಬಿ ಸುರೇಶ್, ಶಿಕ್ಷಕ ನಾಗರಾಜ್ ಮೂಲಗೆ ಹಾಗೂ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಕಡಗಂಚಿಯ ಸದಸ್ಯರಾದ ಥಾಮಸ್ ಹಾಗೂ ಶಿಕ್ಷಕಿಯರಾದ ಜೈಶೀಲಾ, ಕಲಾವತಿ, ಅಲ್ಫೋನ್ಸ್, ರಂಜಿತಾ, ಅನುಷಾ ಉಪಸ್ಥಿತರಿದ್ದರು.

# ಸಮಾಜ ಸೇವೆಗೆ ಪಟ್ಟದ್ದೇವರ ಬದುಕು ಮುಡಿಪು



**ಭಾಲಿ:ಜೂ.9:**, ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಮಾಜ ಸೇವೆಗೆ ಬದುಕು ಮುಡಿಪಾಗಿಟ್ಟಿದ್ದಾರೆ. ಬಡ ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ಜತೆಗೆ ಅನಾಥ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಮಕ್ಕಳಲ್ಲಿ ಸೇವೆಯಲ್ಲಿ ನಿಜವಾದ ದೇವರನ್ನು ಕಾಣುತ್ತಿದ್ದಾರೆ ಎಂದು ಯಾದಗಿರಿ ಜಿಲ್ಲೆಯ ಗುರುಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ಅಭಿಪ್ರಾಯಪಟ್ಟರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದ ಅನುಭವ ಮಂಟಪದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಷ್ಟ್‌ನ ವತಿಯಿಂದ ಸೋಮವಾರ ಆಯೋಜಿಸಿದ್ದ ಚನ್ನಬಸವೇಶ್ವರ ಗುರುಕುಲ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮಠದ ಆಸ್ತಿ, ಅಂತಸ್ತು, ಅಧಿಕಾರಕ್ಕಾಗಿ ಜಗಳವಾಡುವ ಮಠಾಧೀಶರು ನಮ್ಮ ಮಧ್ಯ ಸಾಕಷ್ಟಿದ್ದಾರೆ. ಆದರೆ, ಅನಾಥ ಮಕ್ಕಳ ಆಶ್ರಯ ಮತ್ತು ಸೇವೆಗೈಯಲು ಡಾ.ಬಸವಲಿಂಗ ಪಟ್ಟದ್ದೇವರು ನ್ಯಾಯಾಲಯ ಕಟಕಟೆ ಹತ್ತಿದ್ದು ಮಾದರಿ ಎನಸಿದೆ. ಇಂತಹ ಸ್ವಾಮೀಜಿ ಸಮಾಜದಲ್ಲಿ ಸಿಗುವುದು ಅಪರೂಪ ಎಂದರು. ಹೆತ್ತವರಿಗೆ ಬೇಡವಾದ ಮಕ್ಕಳನ್ನು ಕರೆತಂದು ಶಿಕ್ಷಣ, ಸಂಸ್ಕಾರ ಕಲ್ಪಿಸಿ ಇದು ವರೆಗೂ ಮಕ್ಕಳಿಲ್ಲದ 107 ಕುಟುಂಬಗಳಿಗೆ ಮಕ್ಕಳನ್ನು ಹಸ್ತಾಂತರಿಸಿ ಅವರ ಬಾಳು ಬೆಳಗಿಸಿ ನಿಜವಾದ ಸಮಾಜ ಸೇವೆಗೈಯುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಪರಮ ಪೂಜ್ಯರು ವಿದ್ಯಾ ದೇಗುಲ ತೆರೆದು ಗ್ರಾಮೀಣ ಭಾಗದ ಸಾವಿರಾರೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಸಂಸ್ಕಾರ ಕಲ್ಪಿಸಿ ದೇಶಕ್ಕೆ ಉತ್ತಮ ನಾಗರಿಕರನ್ನಾಗಿ ರೂಪಿಸುತ್ತಿದ್ದಾರೆ. ಲಾಭ ನಷ್ಟದ ವಿಚಾರ ಮಾಡದೇ, ಜಾತಿಭೇದ ಎನ್ನದೇ ಎಲ್ಲ ವರ್ಗದ ಮಕ್ಕಳಿಗೆ ಶಿಕ್ಷಣ ನೀಡಿ ಪರಮ ಪೂಜ್ಯರು ಕಲ್ಯಾಣದ ಆಧುನಿಕ ಬಸವಣ್ಣನವರಾಗಿದ್ದಾರೆ ಎಂದು ಬಣ್ಣಿಸಿದರು.

ತಂದೆ ತಾಯಿಂದರು ಮಕ್ಕಳ ಕೈಗೆ ಹೆಚ್ಚಾಗಿ ಮೊಬೈಲ್ ನೀಡುವುದನ್ನು ನಿಷೇಧಿಸಿ, ಪುಸ್ತಕ ಓದುವ ಸಂಸ್ಕೃತಿ ಬೆಳೆಸಬೇಕು. ಮಕ್ಕಳನ್ನು ಬೇರೆಯವರ ಜತೆಗೆ ಯಾವುದೇ ಕಾರಣಕ್ಕೂ ಹೊಂದಾಣಿಕೆ ಮಾಡಬಾರದು. ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಿ ಮಕ್ಕಳಿಗೆ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಉದ್ಯಮಿ ಸಂತೋಷ ತಾಳಂಪಳ್ಳಿ ಬಸವ ಗುರುವಿನ ಪೂಜೆ ನೆರವೇರಿಸಿದರು. ಪ್ರಾಚಾರ್ಯ ಬಸವರಾಜ ಮೊಳಕೀರೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು
ಮಾತನಾಡಿದರು. ಈ ಸಂದರ್ಭದಲ್ಲಿ ಹಾವಶೆಟ್ಟಿ ಪಾಟೀಲ್, ಬೀದರ್ ರೋಟರಿ ಕ್ಲಬ್ ಅಧ್ಯಕ್ಷ ಆದೀಶ ಡಾ.ರಜನೀಶ ವಾಲಿ, ಪದಾಧಿಕಾರಿಗಳಾದ ಮುಖ್ಯಗುರು ಮಹೇಶ ಮಹಾರಾಜ, ಎಸ್ಸೆಸ್ಸೆಲ್ಸಿ ಸಂಯೋಜಕ ಪ್ರವೀಣ ಖಂಡಾಳೆ ಸೇರಿದಂತೆ ಹಲವರು ಇದ್ದರು. ಕು.ಖುಷಿ ಮತ್ತು ತ್ರಿಷಾ ಪ್ರಾರ್ಥನೆ ಗೀತೆ ನಡೆಸಿ ಕೊಟ್ಟರು. ಆಡಳಿತಾಧಿಕಾರಿ ಮೋಹನ ರೆಡ್ಡಿ ಸ್ವಾಗತಿಸಿದರು. ಲಕ್ಷ್ಮಣ ಮೇತ್ರೆ ನಿರೂಪಿಸಿ, ವಂದಿಸಿದರು.

ಕಲ್ಯಾಣದ ಪ್ರಗತಿಗೆ ಕಂದಕೂರ ಸದನದಲ್ಲಿ ಧ್ವನಿ

ಕಲ್ಯಾಣ ಕರ್ನಾಟಕದ ಪ್ರಗತಿಗಾಗಿ ಗುರಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ವಿಧಾನಸೌಧದ ಒಳಗೆ ಮತ್ತು ಹೊರಗೆ ಧ್ವನಿಯೆತ್ತುತ್ತಿದ್ದಾರೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮೆಚ್ಚುಗೆ ವ್ಯಕ್ತ ಪಡಿಸಿದರು. ಈ ಭಾಗದ ಆರೋಗ್ಯ, ಶಿಕ್ಷಣ, ಕೃಷಿ ಸೇರಿ ಜನರ ಮುಂತಾದ ಜಲ್ವಂತ ಸಮಸ್ಯೆಗಳಿಗೆ ಕಂದಕೂರ ಅವರು ಧ್ವನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸರಳ, ಸಜ್ಜನಿಕೆಗೆ ಹೆಸರಾಗಿರುವ ಕಂದಕೂರ ಅವರು ಯುವಶಕ್ತಿಯ ಬ್ರ್ಯಾಂಡ್ ಆಗಿ ಗುರುತಿಸಿ ಕೊಂಡು ತಮ್ಮದೇ ಆದ ಅಭಿಮಾನಿ ಬಳಗ ಸಂಪಾದಿಸಿದ್ದಾರೆ. ಅವರಿಗೆ ಮುಂದಿನ ಜನರ ಸೇವೆಗೈಯಲು ವಿಶ್ವಗುರು ಬಸವಣ್ಣನವರು ಮತ್ತಷ್ಟು ಶಕ್ತಿ ನೀಡಲಿ ಎಂದು ಹಾರೈಸಿದರು.

ಬಡ ಮಕ್ಕಳ ಶಿಕ್ಷಣಕ್ಕೆ ರೋಟರಿ ಸಿಲ್ವರ್‌ನಿಂದ 17.50 ಲಕ್ಷ ರೂ ನೆರವು

ಬೀದರ್ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಡ ಮಕ್ಕಳ ಶಿಕ್ಷಣಕ್ಕೆ ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್ 17.50 ಲಕ್ಷ ರೂ ನೆರವು ನೀಡಿದೆ. ರೋಟರಿ ಅಧ್ಯಕ್ಷ ಆದೀಶ್ ಡಾ.ರಜನೀಶ ವಾಲಿ ನೇತೃತ್ವದಲ್ಲಿ ಪದಾಧಿಕಾರಿಗಳು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಷ್ಟನ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ರೋಟರಿ ಪದಾಧಿಕಾರಿಗಳಾದ ಭಾವೇಶ ಪಟೇಲ್, ಗುರು ಸಿಂಧೋಲ, ಅರವಿಂದ ಪಾಟೀಲ್, ಸಹನಾ ಪಾಟೀಲ್, ಮಹೇಶ ಚಿಮಕೋಡೆ ಹಾಜರಿದ್ದರು.

137 ಮಕ್ಕಳಿಗೆ ಸನ್ಮಾನ

2025–26ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಅಗ್ರಶ್ರೇಣಿಯಲ್ಲಿ ಪಾಸಾದ 137 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ರಾಜ್ಯಕ್ಕೆ ಎರಡನೇ ಯಾರ್ಂಕ್ ಪಡೆದ ಆನಂದ ಪಾಂಡುರಂಗ 624, ಅಜಯಕುಮಾರ 620, ಶಿವಂ 618, ಸ್ಪೂರ್ತಿ 617, ಪ್ರಿಯಾ 615, ಸೌರಭ 615, ಅಮರ 614, ದರ್ಶನ 613, ನಾಗೇಶ 612, ಶಿವಕನ್ಯಾ 611, ಅಭಿಷೇಕ 611 ಸೇರಿದಂತೆ ಒಟ್ಟು 137 ಮಕ್ಕಳನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಗ್ರಾಮೀಣ ಭಾಗದ ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕು ಎನ್ನುವ ಧ್ಯೇಯೋದ್ದೇಶದೊಂದಿಗೆ ತೆರೆದ ವಿದ್ಯಾ ದೇಗುಲ ಇಂದು ಈ ಭಾಗದ ಮಕ್ಕಳ ಆಶಾಕಿರಣವಾಗಿ ಬೆಳೆದು ನಿಂತಿದೆ. ಈ ಸಂಸ್ಥೆಯ ಯಶಸ್ಸಿನ ಹಿಂದೆ ಆಡಳಿತ, ಶಿಕ್ಷಕರ, ಸಿಬ್ಬಂದಿ ವರ್ಗದವರ ಪರಿಶ್ರಮ ಅಪಾರವಾಗಿದೆ.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ
ಪೋಷಕರಿಗೆ ಒಂದೆರೆಡು ಮಕ್ಕಳು ಇದ್ದರೇ ಪಾಲನೆ ಮಾಡುವುದು ಸವಾಲು ಆಗಿರುವ ಇಂದಿನ ಕಾಲಘಟ್ಟದಲ್ಲಿ ಪರಮ ಪೂಜ್ಯರು ಸಾವಿರಾರೂ ಮಕ್ಕಳಿಗೆ ಶಿಕ್ಷಣ, ಅನ್ನ, ಆಶ್ರಯ, ಉತ್ತಮ ಸಂಸ್ಕಾರ ಕಲ್ಪಿಸಿ ಸಮಾಜಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಿರುವುದು ಮಾದರಿ ಎನಸಿದೆ.

ಶರಣಗೌಡ ಕಂದಕೂರ ಶಾಸಕರು ಗುರುಮಠಕಲ್

# ಪುರುಷರ ಹಿತರಕ್ಷಣಾ ಜಿಲ್ಲಾ ಸಮಿತಿ ಅಸ್ತಿತ್ವಕ್ಕೆ ರಾಮಕೃಷ್ಣ ಅಧ್ಯಕ್ಷ

**ಬಳ್ಳಾರಿ, ಜೂ.09:** ಸಮಾಜದಲ್ಲಿ ಮಹಿಳೆಯರಿಂದ ಪುರುಷರೂ ಸಹ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಅದಕ್ಕಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಪುರುಷರ ಹಿತರಕ್ಷಣಾ ಸಮಿತಿ ರಚನೆ ಮಾಡಿದೆಂದು ಸಮಿತಿಯ ಅಧ್ಯಕ್ಷೆ ರಜಿನಿ ರಾಜ್ ಹೇಳಿದರು.ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ. ಮಹಿಳೆಯರ ಮೇಲೆ ದೌರ್ಜನ್ಯ ನಡೆದರೆ, ಮಹಿಳಾ ಆಯೋಗ ಸೇರಿದಂತೆ ಅನೇಕ ಹೋರಾಟದ ಸಂಘ ಸಂಸ್ಥೆಗಳಿವೆ. ಕಾನೂನುಗಳೂ ಇವೆ. ಆದರೆ ಕಾನೂನುಗಳನ್ನು ದುರ್ಬಳಕೆ ಮಾಡಿಕೊಂಡು ಮಹಿಳೆಯರು ಪುರುಷರ ಮೇಲೆ ದೌರ್ಜನ್ಯ ನಡೆದರೆ, ಪುರುಷರಿಗೆ ರಕ್ಷಣೆ ಇಲ್ಲದಾಗಿದೆ. ಅದಕ್ಕಾಗಿ ದೌರ್ಜನ್ಯಕ್ಕೆ ಒಳಗಾದ ಪುರುಷರೊಂದಿಗೆ ಸಮಾಲೋಚನೆ ಮಾಡಿ ಹೊಸ ಕಾನೂನು ಬಿಏನ್ ಎಸ್ 318 ರ ಕಾನೂನು ಅಡಿ ಹೋರಾಟಕ್ಕೆ ಸಹಕಾರ ನೀಡಲಿದೆ.

ಈ ಸಮಿತಿಯ ಬಳ್ಳಾರಿ ಜಿಲ್ಲಾ ಅಧ್ಯಕ್ಷರನ್ನಾಗಿ ಬ್ಯಾಂಕಿನ ನಿವೃತ್ತ ಉದ್ಯೋಗಿ ರಾಮಕೃಷ್ಣ ಅವರನ್ನು ನೇಮಕ ಮಾಡಿದೆಂದು ತಿಳಿಸಿದರು.ನಮ್ಮ ಸಮಿತಿಗೆ ಎರೆಡು ಸಾವಿರ ನೀಡಿ ಅಜೀವ ಸದಸ್ಯತ್ವ ಪಡೆಯಬಹುದು ಈ ರೀತಿ ಬಳ್ಳಾರಿ ಜಿಲ್ಲೆಯಲ್ಲಿ ಏಳು ಜನ ಸದಸ್ಯರಾಗಿದ್ದಾರೆ.ಬಳ್ಳಾರಿ ನಗರದಲ್ಲಿ ಮಹಿಳೆಯರಿಂದ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗೆ ನ್ಯಾಯ ಕೊಡಿಸುವ ಪ್ರಯತ್ನ ನಡೆದಿದೆಂದು ತಿಳಿಸಿದರು.ಸುದ್ದಿಗೋಷ್ಟಿಯಲ್ಲಿ ಸಮಿತಿಯ ಖಜಾಂಚಿ ವೇದವಲ್ಲಿ, ಮ್ಯಾನೇಜಿಂಗ್ ಟ್ರಸ್ಟಿ ಶಕುಂತಲಾ, ರಾಮಕೃಷ್ಣ ಮುಂತಾದವರು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE